# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮಾರ್ಚ್ 12, 2021

ಸಂಪುಟ : 47 ಸಂಚಿಕೆ : 312 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ದೇವನಗರಿಯಲ್ಲಿ ಶಿವರಾತ್ರಿ ಸಂಭ್ರಮ

## ಶಿವಾಲಯಗಳಲ್ಲಿ ವಿಶೇಷ ಪೂಜೆ-ಅಲಂಕಾರ, ಕೈಲಾಸವಾಸಿಯ ದರ್ಶನಕ್ಕೆ ಸರದಿ ಸಾಲು


ಲಿಂಗೇಶ್ವರ ದೇವಸ್ಥಾನ


ಶಿವಧ್ಯಾನ ಮಂದಿರ


ಪಾತಾಳ ಲಿಂಗೇಶ್ವರ


ಈಶ್ವರ ಪಾರ್ವತಿ ದೇವಸ್ಥಾನ


ಹರಿಹರದ ಹರಿಹರೇಶ್ವರ

ದಾವಣಗೆರೆ, ಮಾ.11- ಬೆಳಿಗ್ಗೆಯಿಂದಲೇ ರಾತ್ರಿಯ ಜಾಗರಣೆಗೆ ತಯಾರಿ, ಪೂಜಾ ಸಾಮಗ್ರಿಗಳು, ಹಣ್ಣು, ಹೂ ಖರೀದಿ. ಸಂಜೆಯಾಗುತ್ತಲೇ ಎಲ್ಲೆಡೆ ಓಂ ಕಾರದ ಝೇಂಕಾರ. ದೇವಸ್ಥಾನಗಳಲ್ಲಿ ವಿಶೇಷ ಪೂಜೆ. ಓಂ ನಮಃ ಶಿವಾಯ ಮಂತ್ರ ಪಠಣ.

ಹೌದು, ನಗರದಲ್ಲಿ ಶಿವರಾತ್ರಿ ಆಚರಣೆಯನ್ನು ಸಂಭ್ರಮ ಹಾಗೂ ಭಕ್ತಿಯಿಂದ ಆಚರಿಸಲಾಯಿತು. ಶಿವನ ದೇವಾಲಯಗಳನ್ನು ತಳಿರುತೋರಣ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ಕೈಲಾಸವಾಸಿಗೆ ವಿಶೇಷ ಪೂಜೆ, ಹೋಮಗಳು ನಡೆದವು. ಶಿವನಿಗೆ ವಿಶೇಷವಾಗಿ ಹೂವಿನಿಂದ ಅಲಂಕರಿಸಲಾಗಿತ್ತು.

ಮನೆಗಳಲ್ಲಿ ವಿಶೇಷ ಪೂಜೆ, ಶಿವನಿಗೆ ಅಭಿಷೇಕ ನಡೆಸಿ, ನೈವೇದ್ಯ ಸಮರ್ಪಿಸಲಾಯಿತು. ಸಂಜೆಯಾಗುತ್ತಲೇ ಭಕ್ತರು ಸರದಿ ಸಾಲಿನಲ್ಲಿ ನಿಂತು ಶಿವನ ದರುಶನ ಪಡೆದರು. ಹಲವೆಡೆ ದೇವಸ್ಥಾನಗಳಲ್ಲಿ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು. ತಡ ರಾತ್ರಿ ವರೆಗೆ ದೇವಸ್ಥಾನಗಳ ಮುಂದೆ ಭಕ್ತರ ಜಾತ್ರೆಯೇ ನೆರೆದಿತ್ತು.

ಇತ್ತ ನಗರದ ವಿವಿಧ ಬಡಾವಣೆಗಳಲ್ಲಿ ಜಾಗರಣೆ ನೆಪದಲ್ಲಿ ಚಿಕ್ಕ ಮಕ್ಕಳು, ಯುವಕರು, ಯುವತಿಯರು ವಿವಿಧ ಆಟಗಳಲ್ಲಿ ತೊಡಗಿಸಿಕೊಂಡಿದ್ದರು. ಚೆಸ್, ಕೇರಂ, ಷಟಲ್ ಬ್ಯಾಟ್, ಕ್ರಿಕೆಟ್ ಹೀಗೆ ಆಟಗಳು ನಡೆದಿದ್ದವು. ಇಂದು ಮತ್ತೆ ಕೆಲಸ ಕಾರ್ಯಗಳಿಗೆ ತೆರಳಬೇಕಾದವರು ಜಾಗರಣೆಯಿಂದ ದೂರವೇ ಉಳಿದು, ಎಂದಿನಂತೆ ನಿದ್ರೆಗೆ ಜಾರಿದ್ದರು.

ಗುರುವಾರ ಮುಂಜಾನೆಯೇ ಮಾರುಕಟ್ಟೆಯಲ್ಲಿ (5ನೇ ಪುಟಕ್ಕೆ)

# ಮತ್ತೆ ಉಲ್ಬಣಿಸಿದ ಕೊರೊನಾ ಸೋಂಕು

## ಮಹಾರಾಷ್ಟ್ರದಲ್ಲಿ ಮತ್ತೆ ಲಾಕ್‌ಡೌನ್, ಕೆಲ ರಾಜ್ಯಗಳಿಗೆ ಕೇಂದ್ರದ ಎಚ್ಚರಿಕೆ


ನವದೆಹಲಿ, ಮಾ. 11 – ಗುರುವಾರದಂದು ಪ್ರಸಕ್ತ ವರ್ಷದಲ್ಲೇ ಅತಿ ಹೆಚ್ಚಿನ ಕೊರೊನಾ ಸೋಂಕು ಪ್ರಕರಣಗಳು ಕಂಡು ಬಂದಿದ್ದು, ಸೋಂಕಿನ ಬಗ್ಗೆ ಕಟ್ಟೆಚ್ಚರ ವಹಿಸಬೇಕು ಹಾಗೂ ಲಸಿಕೆ ಪಡೆಯಬೇಕು ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಗುರುವಾರ ಒಂದೇ ದಿನ ದೇಶಾದ್ಯಂತ 22,854 ಸೋಂಕು ಪ್ರಕರಣಗಳು ಕಂಡು ಬಂದಿವೆ. ಇದೇ ದಿನ 126 ಜನರು ಸಾವನ್ನಪ್ಪಿ ದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದು ಈ ವರ್ಷ ಒಂದೇ ದಿನ ಕಂಡು ಬಂದ ಪ್ರಕರಣಗಳಲ್ಲಿ ಅತಿ ಹೆಚ್ಚಿನದಾಗಿದೆ. ಈ ಹಿಂದೆ, ಡಿಸೆಂಬರ್ 25 ರಂದು 23,067 ಪ್ರಕರಣಗಳು ಪತ್ತೆಯಾಗಿದ್ದವು.

ಕೆಲ ರಾಜ್ಯಗಳಲ್ಲಿ ಸಕ್ರಿಯ ಸೋಂಕುಗಳು ಹೆಚ್ಚಾಗುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿರುವ ನೀತಿ ಆಯೋಗದ ಸದಸ್ಯ (ಆರೋಗ್ಯ) ವಿ.ಕೆ. ಪೌಲ್, ಪರಿಸ್ಥಿತಿ ಕಳವಳಕಾರಿಯಾಗಿದೆ. ವಿಶೇಷವಾಗಿ ಕಠಿಣ ಲಾಕ್‌ಡೌನ್ ಪರಿಸ್ಥಿತಿ ಕಂಡು ಬಂದಿರುವ ಮಹಾರಾಷ್ಟ್ರದಲ್ಲಿ ಪರಿಸ್ಥಿತಿ ಇನ್ನೂ ಕಳವಳಕಾರಿಯಾಗಿದೆ ಎಂದಿದ್ದಾರೆ.

ಈ ವೈರಸ್ ಅನ್ನು ಹಗುರವಾಗಿ ಪರಿಗಣಿಸ ಬೇಡಿ. ವೈರಸ್ ಅನಿರೀಕ್ಷಿತವಾಗಿ ಬರಬಹುದು. ನಾವು ವೈರಸ್‌ನಿಂದ ಮುಕ್ತವಾಗಿರಬೇಕು. ಇದಕ್ಕಾಗಿ ಸೂಕ್ತ ವರ್ತನೆ ರೂಢಿಸಿಕೊಳ್ಳಬೇಕು, ವೈರಸ್ ನಿಯಂತ್ರಣ ತಂತ್ರಗಾರಿಕೆ ರೂಪಿಸಿಕೊಳ್ಳಬೇಕು ಎಂದವರು ತಿಳಿಸಿದ್ದಾರೆ.

ಕೊರೊನಾ ಪ್ರಕರಣಗಳು ಅತಿ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಲಸಿಕೆ ಪಡೆಯಲು ಅರ್ಹರಾಗಿರುವವರು ತ್ವರಿತವಾಗಿ ಪಡೆಯಬೇಕು. ಲಸಿಕೆ ಪ್ರಕ್ರಿಯೆ ಚುರುಕುಗೊಳಿಸಬೇಕು ಎಂದು ತಿಳಿಸಿದ್ದಾರೆ.



ದೆಹಲಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ತಿಳಿಸಿರುವ ಪೌಲ್, ಈ ಪ್ರದೇಶದಲ್ಲಿ ಕೊರೊನಾ ಪಾಸಿಟಿವ್ ಕಂಡು ಬರುತ್ತಿರುವ ಪ್ರಮಾಣ ಹೆಚ್ಚಾಗುತ್ತಿದೆ. ಗುರ್ಗಾಂವ್, ಫರೀದಾಬಾದ್ ಹಾಗೂ ಗೌತಮ ಬುದ್ಧ ನಗರ ಮತ್ತು ಘಾಜಿಯಾಬಾದ್‌ಗಳಲ್ಲಿ ಸೋಂಕು ಹೆಚ್ಚಾಗುತ್ತಿದೆ ಎಂದಿದ್ದಾರೆ.

ನಾವು ಈಗಲೂ ಕಟ್ಟೆಚ್ಚರ ವಹಿಸಬೇಕು. ಕೊರೊನಾ ಸೋಂಕು ಇನ್ನೂ ಮುಗಿದಿಲ್ಲ. ದೊಡ್ಡ ಸಂಖ್ಯೆಯ ಜನರು ಈಗಲೂ ವೈರಸ್ ಅಪಾಯದಲ್ಲಿದ್ದಾರೆ. ಲಸಿಕೆಯ ಮೂಲಕ ನಾವು ವೈರಸ್ ವಿರುದ್ಧ ಬಲಿಷ್ಠ ಹೋರಾಟ ನಡೆಸಬಹುದು ಎಂದವರು ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಡಾ. ಬಲರಾಮ್ ಭಾರ್ಗವ, ಮಹಾರಾಷ್ಟ್ರದಲ್ಲಿ ವೈರಸ್ ಸೋಂಕು ಗಣನೀಯವಾಗಿ ಹೆಚ್ಚಲು ರೂಪಾಂತರಿ ಸೋಂಕು ಕಾರಣವಲ್ಲ ಎಂದಿದ್ದಾರೆ.

ಪರೀಕ್ಷೆ, ಪತ್ತೆ ಹಾಗೂ ಗುರುತಿಸುವಿಕೆ (2ನೇ ಪುಟಕ್ಕೆ)

### ಪ್ರಾಯೋಗಿಕ ಹಂತ ದಾಟಿದ ಕೊವ್ಯಾಕ್ಸಿನ್

**ನವದೆಹಲಿ, ಮಾ. 11 – ಭಾರತ್ ಬಯೋಟೆಕ್ ದೇಶೀಯವಾಗಿ ರೂಪಿಸಿರುವ ಕೊವ್ಯಾಕ್ಸಿನ್ ಲಸಿಕೆ ಪ್ರಾಯೋಗಿಕ ಹಂತ ದಾಟಿ ಮುಂದುವರೆದಿದೆ. ಈಗ ಕೊವಿಶೀಲ್ಡ್ ರೀತಿಯಲ್ಲಿ ಕೊವ್ಯಾಕ್ಸಿನ್ ಲಸಿಕೆಯ ನಿರ್ಬಂಧಿತ ತುರ್ತು ಬಳಕೆಗೆ ಅನುಮತಿ ನೀಡಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ರುವ ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ.ವಿ.ಕೆ. ಪೌಲ್, ಕೊವ್ಯಾಕ್ಸಿನ್ ಹಾಗೂ ಕೊವಿಶೀಲ್ಡ್ ಈಗ ಒಂದೇ ರೀತಿಯ ಅನುಮತಿ ಹೊಂದಿವೆ ಎಂದಿದ್ದಾರೆ.**

### ಅಸ್ಟ್ರಾಜೆನೆಕಾ ಲಸಿಕೆ : ಯುರೋಪ್ ತಡೆ

**ಕೂಪನ್‌ಹೇಗನ್, ಮಾ. 11 – ಅಸ್ಟ್ರಾಜೆನೆಕಾ ಉತ್ಪಾದಿಸಿರುವ ಕೊರೊನಾ ಲಸಿಕೆಯಿಂದ ರಕ್ತ ಕಣಗಳು ಹೆಪ್ಪುಗಟ್ಟುವ ಕಳವಳಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ, ಡೆನ್ಮಾರ್ಕ್, ನಾರ್ವೆ ಹಾಗೂ ಐಸ್‌ಲ್ಯಾಂಡ್‌ಗಳು ಲಸಿಕೆಯ ಬಳಕೆಯನ್ನು ತಡೆದಿವೆ. ಡೆನ್ಮಾರ್ಕ್ ಮೊದಲು ಈ ಬಗ್ಗೆ ಘೋಷಣೆ ಮಾಡಿದೆ. ಮುನ್ನೆಚ್ಚರಿಕೆಯಿಂದ ಈ ಕ್ರಮ ತೆಗೆದುಕೊಂಡಿರುವು ದಾಗಿ ತಿಳಿಸಲಾಗಿದೆ. ಕಳೆದ ಮಾರ್ಚ್ 9ರಂದು ಯುರೋಪ್ ವಲಯದಲ್ಲಿ ಲಸಿಕೆ ಪಡೆದ 30 ಲಕ್ಷ ಜನರ ಪೈಕಿ 22 ಜನರಲ್ಲಿ ರಕ್ತ ಕಣಗಳು ಹೆಪ್ಪುಗಟ್ಟಿದ್ದು ಕಂಡು ಬಂದಿದೆ. ಅಸ್ಟ್ರಾಜೆ ನೆಕಾದ ಲಸಿಕೆ ಬಳಕೆ ತಡೆದಿರುವುದಾಗಿ ಆಸ್ಟ್ರಿಯಾ ತಿಳಿಸಿತ್ತು. ಇಸ್ಟೋನಿಯ, ಲಾಟ್ವಿಯ, ಲಿಥುವಾನಿಯ ಹಾಗೂ ಲಕ್ಸೆಂಬರ್ಗ್‌ಗಳು ಲಸಿಕೆಯ ಬಳಕೆ ತಡೆದಿವೆ.**

## ಎರಡನೇ ಸುತ್ತಿನ ಲಸಿಕೆ ಪಡೆದ ಡಿಸಿ-ಎಸ್ಪಿ

ದಾವಣಗೆರೆ, ಮಾ. 11 - ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಕೊರೊನಾ ಲಸಿಕೆಯಾದ ಕೊವಿಶೀಲ್ಡ್‌ನ ಎರಡನೇ ಡೋಸ್ ಪಡೆದುಕೊಂಡಿದ್ದಾರೆ.

ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಉಭಯರು ಲಸಿಕೆ ಪಡೆದಿದ್ದಾರೆ. ಜಿಲ್ಲಾಧಿಕಾರಿಗಳ ಜೊತೆ ಅವರ ಕಚೇರಿಯ ಹಲವು ಸಿಬ್ಬಂದಿ ಸಹ ಲಸಿಕೆ ಪಡೆದರು. ಈ ಸಂದರ್ಭದಲ್ಲಿ ಲಸಿಕೆ ಪಡೆದ ಹಿರಿಯ ನಾಗರಿಕರ ಜೊತೆಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿ ಬೀಳಗಿ, ನಿಮ್ಮಂತೆಯೇ ಉಳಿದವರೂ ಲಸಿಕೆ ಪಡೆಯಲು ಕಿವಿಮಾತು ಹೇಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ಕೊರೊನಾ ಲಸಿಕೆ ಅತ್ಯಂತ ಸುರಕ್ಷಿತವಾಗಿದ್ದು, ಜಿಲ್ಲೆಯ 45 ವರ್ಷದ ಮೇಲಿನ ಸಹ ಅಸ್ವಸ್ಥತೆ ಹೊಂದಿರುವವರು ಹಾಗೂ 60 ವರ್ಷ ಮೀರಿದವರು ಕೇವಲ ಆಧಾರ್ ಕಾರ್ಡ್ ತಂದು ಉಚಿತವಾಗಿ (2ನೇ ಪುಟಕ್ಕೆ)

## ಲಸಿಕೆ ದರ 200 ರೂ.ಗೆ ಇಳಿಕೆ

ನವದೆಹಲಿ, ಮಾ. 11 – ಖಾಸಗಿ ಆಸ್ಪತ್ರೆಗಳಲ್ಲಿ ಪಡೆಯುವ ಕೊರೊನಾ ಲಸಿಕೆಯ ದರವನ್ನು ಕೇಂದ್ರ ಸರ್ಕಾರ ಪ್ರತಿ ಡೋಸ್‌ಗೆ 200 ರೂ.ಗಳಿಗೆ ಇಳಿಕೆ ಮಾಡಿದೆ. ಪ್ರಸಕ್ತ ಡೋಸ್ ಲಸಿಕೆ ದರ 250 ರೂ. ಆಗಿದೆ.


ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಲಸಿಕೆಗಳು ಇನ್ನು ಮುಂದೆ ಪ್ರತಿ ಡೋಸ್‌ಗೆ 200 ರೂ.ಗಳಂತೆ ಲಭ್ಯವಾಗಲಿವೆ ಎಂದಿದ್ದಾರೆ. ಇದೇ ವೇಳೆ, ದೇಶದ ಯಾವುದೇ ಭಾಗದಲ್ಲೂ ಲಸಿಕೆಯ ಕೊರತೆಯಿಲ್ಲ ಎಂದೂ ಅವರು ಹೇಳಿದ್ದಾರೆ. ರಾಜಸ್ಥಾನದಲ್ಲಿ ಲಸಿಕೆಯ ಕೊರತೆಯಾಗಿದೆ ಎಂಬ ವರದಿಗಳು ಇತ್ತೀಚೆಗೆ ಬಂದಿದ್ದವು.

## ಆತ್ಮನಿರ್ಭರ್ ಭಾರತದಿಂದ ವಿಶ್ವಕ್ಕೆ ಒಳಿತು : ಮೋದಿ

ನವದೆಹಲಿ, ಮಾ. 11 – ಸ್ವಾವಲಂಬಿ ಭಾರತದಿಂದ ವಿಶ್ವಕ್ಕೆ ಒಳಿತಾಗಲಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆಸ್ತಿ ಹಾಗೂ ಮೌಲ್ಯಗಳನ್ನು ಸ್ವಂತಕ್ಕೆ ಸೀಮಿತ ಮಾಡದೇ ಮಾನವೀಯತೆಗೆ ಒದಗಿಸುವುದೇ ಆತ್ಮನಿರ್ಭರ್ ಭಾರತದ ಮೂಲ ತಿರುಳಾಗಿದೆ ಎಂದಿದ್ದಾರೆ. ಸ್ವಾಮಿ ಚಿದ್ಭವಾನಂದ ಅವರ ಭಗವದ್ ಗೀತೆಯ ಕಿಂಡಲ್ ಅವತರಣಿಕೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

130 ಕೋಟಿ ಜನರು ಭಾರತವನ್ನು ಆತ್ಮನಿರ್ಭರ್ ಮಾಡಲು ಬಯಸಿದ್ದಾರೆ. ದೀರ್ಘಾವಧಿಯಲ್ಲಿ ಆತ್ಮನಿರ್ಭರ್ ಭಾರತ ಎಲ್ಲರಿಗೂ ಹಿತ ತರಲಿದೆ (2ನೇ ಪುಟಕ್ಕೆ)

## ಬ್ರಹ್ಮಾಕುಮಾರಿ ದಾದಿ ಹೃದಯ ಮೋಹಿನಿ ನಿಧನ



ಜೈಪುರ, ಮಾ. 11 – ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಆಡಳಿತಾಧಿಕಾರಿ ದಾದಿ ಹೃದಯ ಮೋಹಿನಿ ಅವರು ಗುರುವಾರ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅವರಿಗೆ 93 ವರ್ಷ ವಯಸ್ಸಾಗಿತ್ತು. ಕಳೆದ 15 ದಿನಗಳಿಂದ ಅವರು ಮುಂಬೈನ ಸೈಫೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು (2ನೇ ಪುಟಕ್ಕೆ)

### ಕಾಂಗ್ರೆಸ್ ಸೇರುವುದಾಗಿ ಹೇಳಿದ ಮಧು ಬಂಗಾರಪ್ಪ

ಬೆಂಗಳೂರು, ಮಾ. 11 – ಜೆಡಿಎಸ್‌ನ ಮಾಜಿ ಶಾಸಕ ಮಧು ಬಂಗಾರಪ್ಪ ಅವರು ಕಾಂಗ್ರೆಸ್ ಸೇರುವುದಾಗಿ ಗುರುವಾರ ಘೋಷಿಸಿದ್ದು, ಈ ಕುರಿತು ಸುದೀರ್ಘ ಕಾಲದಿಂದ ಕೇಳಿ ಬರುತ್ತಿದ್ದ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ನನ್ನ ಎಲ್ಲ ಬೆಂಬಲಿಗರು ಈ ಬಗ್ಗೆ ನಿರ್ಧರಿಸಿದ್ದಾರೆ. ಅದರಂತೆ ನಾನು ಕಾಂಗ್ರೆಸ್ ಸೇರುತ್ತಿದ್ದೇನೆ ಎಂದಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ದೇಶಕ್ಕೆ (2ನೇ ಪುಟಕ್ಕೆ)


**ಸಾಲ ಸೌಲಭ್ಯ**

ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನೆಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ

**63604 56791**


# ವ್ಯಾಯಾಮದಿಂದ ಖರ್ಚಿಲ್ಲದೇ ಮಿತಿ ಇಲ್ಲದ ಲಾಭ: ಸಿಇಒ

### ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆ

ದಾವಣಗೆರೆ, ಮಾ. 11 - ವ್ಯಾಯಾಮಕ್ಕೆ ಹಣವೇನೂ ಬೇಡ. ಆದರೆ, ಅದರಿಂದ ಮಿತಿಯಿಲ್ಲದ ಲಾಭ ಸಿಗುತ್ತದೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ. ವಿಜಯ ಮಹಾಂತೇಶ್ ಬಿ. ದಾನಮ್ಮನವರ ಹೇಳಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದ್ದ ಮೂರು ದಿನಗಳ ದಾವಣಗೆರೆ ಜಿಲ್ಲಾ ಪೊಲೀಸರ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಈ ಹಿಂದೆ ಕ್ರೀಡೆ ಪಠ್ಯೇತರ ಚಟುವಟಿಕೆಯಾಗಿತ್ತು. ಅದನ್ನು ಸಮಯ ಪೋಲು ಮಾಡಿದಂತೆ ಎಂದು ಪರಿಗಣಿಸಲಾಗುತ್ತಿತ್ತು. ಈಗ ಕ್ರೀಡೆ ಪಠ್ಯದ ಅವಿಭಾಜ್ಯ ಅಂಗವಾಗಿದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರ ಫಿಟ್ ಇಂಡಿಯಾ ಅಭಿಯಾನ ನಡೆಸುತ್ತಿದೆ (2ನೇ ಪುಟಕ್ಕೆ)






# ಅಲ್ಪಸಂಖ್ಯಾತರಿಗೆ ಯೋಜನೆ ತಲುಪಿಸದ ಬಿಜೆಪಿ ಆಡಳಿತ

## ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಉಸ್ತುವಾರಿ ಡಾ. ಜಾಫರ್ ಖಾನ್ ಆರೋಪ



ದಾವಣಗೆರೆ, ಮಾ.11- ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹಲವು ಯೋಜನೆ ಜಾರಿಗೆ ತಂದಿತ್ತು. ಆದರೆ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಅಲ್ಪಸಂಖ್ಯಾರಿಗೆ ಯೋಜನೆಗಳನ್ನು ತಲುಪಿಸದೆ ಜಾತಿ, ಧರ್ಮದ ಆಧಾರದಲ್ಲಿ ಆಡಳಿತ ನಡೆಸುತ್ತಿದೆ ಎಂದು ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಉಸ್ತುವಾರಿ ಡಾ. ಜಾಫರ್ ಖಾನ್ ಆರೋಪಿಸಿದರು.

ಅವರು, ಇಂದು ನಗರದ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ ಜನ ಸಂಘಟನೆಗಾಗಿ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪಕ್ಷ ಸಂಘಟನೆಗಾಗಿ ಎಐಸಿಸಿ ನಾಯಕ ರಾಹುಲ್ ಗಾಂಧಿ ಹೊಸ ದಿಕ್ಕು ಕಾರ್ಯಕ್ರಮ ಹಾಕಿಕೊಂಡಿದ್ದು, ಈ ಮೂಲಕ ಬಿಜೆಪಿ ಸರ್ಕಾರದ ಜನ ವಿರೋಧಿ ನೀತಿಗಳನ್ನು ಜನರಿಗೆ ತಿಳಿಸಿ ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಭಾರತ ಕೇವಲ ಒಂದು ಜಾತಿಯ ದೇಶವಲ್ಲ. ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಹೀಗಾಗಿ ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಸಾಮಾಜಿಕ ನ್ಯಾಯ ದೊರೆಯುವಂತಾಗಬೇಕು ಎಂದು ಆಶಿಸಿದರು.

ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ವೈ. ಸೈಯದ್ ಅಹ್ಮದ್ ಮಾತನಾಡಿ, ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸಿದ್ದರಾಮಯ್ಯ ಸರ್ಕಾರ ಜಾರಿಗೆ ತಂದಿದ್ದ ಹಲವು ಯೋಜನೆಗಳನ್ನು ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಮೊಟಕುಗೊಳಿಸಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಹಿಂದಿನ ಸರ್ಕಾರಗಳು ಬಜೆಟ್‌ನಲ್ಲಿ ನೀಡುತ್ತಿದ್ದ ಅನುದಾನವನ್ನು ಈ ಸರ್ಕಾರ ಕಡಿತ ಗೊಳಿಸುವ ಮೂಲಕ ಅಲ್ಪಸಂಖ್ಯಾತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ಕಾಂಗ್ರೆಸ್, ಜೆಡಿಎಸ್‌ನಲ್ಲಿದ್ದ 17 ಜನ ಶಾಸಕರನ್ನು ರಾಜೀನಾಮೆ ಕೊಡಿಸಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತಂದಿದ್ದು, ಇದೊಂದು ದೌರ್ಜನ್ಯದ ಸರ್ಕಾರವಾಗಿದೆ ಎಂದು ಕಿಡಿಕಾರಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಜಿಲ್ಲೆಯಲ್ಲಿ ಮುಸ್ಲಿಂ ಬಾಂಧವರ ಬೆಂಬಲದಿಂದ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದು, ದೇಶದ ಎಲ್ಲಾ ಜನತೆಯ ಮತಗಳು ವಿಭಜನೆಯಾಗುತ್ತಿವೆ. ಮುಸ್ಲಿಂ ಬಾಂಧವರ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಸಿದ್ದರಾಮಯ್ಯ ಸರ್ಕಾರ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೂರು ಸಾವಿರ ಕೋಟಿ ಅನುದಾನ ನೀಡಿತ್ತು. ಆದರೆ, ಬಿಜೆಪಿ ಸರ್ಕಾರ ಅದನ್ನು ಒಂದೂವರೆ ಸಾವಿರ ಕೋಟಿ ರೂ.ಗೆ ಇಳಿಸಿದೆ ಎಂದು ಆಕ್ಷೇಪಿಸಿದರು.

ಕಾಂಗ್ರೆಸ್ ಮುಖಂಡ ಸೈಯದ್ ಸೈಫುಲ್ಲಾ ಮಾತನಾಡಿ, ದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುಸಲ್ಮಾನರು ಬೆನ್ನೆಲುಬಾಗಿ ನಿಂತಿದ್ದು, ನಮ್ಮ ಸಮುದಾಯದ ನಾಯಕರು ಪಕ್ಷದ ವರಿಷ್ಠರಿಗೆ ಹೇಳಿ ನಮ್ಮ ಯುವ ಕಾರ್ಯಕರ್ತರಿಗೆ ಸ್ಥಾನ-ಮಾನ ಕೊಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮುಖಂಡರಾದ ಅಯೂಬ್ ಪೈಲ್ವಾನ್, ಸಿರಾಜ್ ಅಹ್ಮದ್, ಚಮನ್ ಸಾಬ್, ಅಬ್ದುಲ್ ಲತೀಫ್ ಸೇರಿದಂತೆ ಇತರರು ಇದ್ದರು.

## ಕಾಂಗ್ರೆಸ್ ಸೇರುವುದಾಗಿ ಹೇಳಿದ ಮಧು

(1ನೇ ಪುಟದಿಂದ) ಹಾಗೂ ರಾಜ್ಯಕ್ಕೆ ಕಾಂಗ್ರೆಸ್ ಅವಶ್ಯಕತೆ ಇದೆ. ಕಾಂಗ್ರೆಸ್‌ನಲ್ಲಿ ನಾನು ಹೆಚ್ಚು ಒಳ್ಳೆಯ ಕೆಲಸ ಮಾಡಲು ಸಾಧ್ಯ. ಕಾಂಗ್ರೆಸ್‌ನಲ್ಲಿದ್ದಾಗಲೇ ನನ್ನ ತಂದೆ ಎಸ್. ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದರು ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ನಾನು ಕೆಲಸ ಮಾಡಲು ಹಾಗೂ ಭಾವನೆಗಳನ್ನು ತಿಳಿಸಲು ಹೆಚ್ಚು ಅವಕಾಶವಿದೆ ಎಂದು ಹೇಳಿರುವ ಮಧು ಬಂಗಾರಪ್ಪ, ಹಿಂದಿನ ಜೆಡಿಎಸ್ ಪಕ್ಷದಲ್ಲಿ ಎದುರಿಸಿದ ಕಷ್ಟಗಳ ಬಗ್ಗೆ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಹಲವು ಬಾರಿ ತಿಳಿಸಿದ್ದೆ. ಆದರೆ, ಪಕ್ಷ ತೊರೆಯಲು ಅವರು ಕಾರಣರಲ್ಲ ಎಂದಿದ್ದಾರೆ.

ನಾನು ತೀರ್ಮಾನವನ್ನು ತೆಗೆದುಕೊಳ್ಳಲು ಬಹಳ ಸಮಯ ತೆಗೆದುಕೊಂಡೆ. ಎರಡು ದಿನದ ಹಿಂದೆ ಭೇಟಿಯಾಗಬೇಕಿತ್ತು. ಶಿವರಾತ್ರಿ ಒಳ್ಳೆಯ ದಿನ, ಇಂದು ಭೇಟಿ ಮಾಡಿದ್ದೇನೆ. ಇವತ್ತಿಂದಲೇ ಕೆಲಸ ಆರಂಭಿಸಲು ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ ಎಂದು ಮಧು ಬಂಗಾರಪ್ಪ ಹೇಳಿದರು.

ಶುಕ್ರವಾರ ಪಕ್ಷದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡುತ್ತೇನೆ. ಅವರು ನೀಡುವ ಸಲಹೆ ಆಧರಿಸಿ ಮುಂದಿನ ತೀರ್ಮಾನವನ್ನು ಕೈಗೊಳ್ಳುವೆ. ಅಧಿಕೃತವಾಗಿ ಸೇರ್ಪಡೆಯಾಗುವ ದಿನಾಂಕವನ್ನು ಇನ್ನೂ ಅಂತಿಮಗೊಳಿಸಿಲ್ಲ. ಆದರೆ, ಇಂದಿನಿಂದಲೇ ಕೆಲಸ ಆರಂಭಿಸುತ್ತೇನೆ ಎಂದೂ ತಿಳಿಸಿದ್ದಾರೆ.

ಮಧು ಬಂಗಾರಪ್ಪ ಪಕ್ಷಕ್ಕೆ ವಿದಾಯ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ವರ್ಷದಿಂದಲೇ ಈ ಬಗ್ಗೆ ಮಾತುಕತೆ ನಡೆದಿತ್ತು. ಈ ಬೆಳವಣಿಗೆ ಅಚ್ಚರಿಯೇನೂ ಅಲ್ಲ. ಆದರೆ, ಪಕ್ಷದ ವರಿಷ್ಠ ಹೆಚ್.ಡಿ. ದೇವೇಗೌಡರ ಬೆನ್ನಿಗೆ ಚೂರಿ ಹಾಕುವುದನ್ನು ಜನರು ಅಭ್ಯಾಸ ಮಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹೆಚ್. ಡಿ. ಕುಮಾರಸ್ವಾಮಿ ಮಾತಿಗೆ ಪ್ರತಿಕ್ರಿಯೆ ನೀಡಿದ ಮಧು ಬಂಗಾರಪ್ಪ, ಪಕ್ಷದಲ್ಲಿ ನಾನು ಅಧಿಕಾರ ಅನುಭವಿಸಿ ಹೋಗುತ್ತಿಲ್ಲ. ಸೋತ ಶಾಸಕ ನಾನು, ನನಗೆ ಅಧಿಕಾರ ಸಿಕ್ಕಿಲ್ಲ. ಕುಮಾರಸ್ವಾಮಿ, ದೇವೇಗೌಡರಿಗೆ ವೈಯಕ್ತಿಕವಾಗಿ ಗೌರವ ಕೊಡುತ್ತೇನೆ. ಪಕ್ಷದಲ್ಲಿ ಇರುವುದಿಲ್ಲ ಅಷ್ಟೇ ಎಂದಿದ್ದಾರೆ.

## ಲಸಿಕೆ ಪಡೆದ ಡಿಸಿ-ಎಸ್ಪಿ

(1ನೇ ಪುಟದಿಂದ) ಲಸಿಕೆ ಪಡೆದು ಅಭಿಯಾನ ಯಶಸ್ಸುಗೊಳಿಸಬೇಕೆಂದು ಕರೆ ನೀಡಿದ್ದಾರೆ. ಕಳೆದ ವರ್ಷ ಮಾರ್ಚ್ ತಿಂಗಳಿನಿಂದ ವೈದ್ಯರ ತಂಡ ಕೊರೊನಾ ಯುದ್ಧದಲ್ಲಿ ಕೆಲಸ ಮಾಡುತ್ತಿದೆ. ಈ ಯುದ್ಧ ಯಶಸ್ವಿಯಾಗಲು ಜನರು ಕೈ ಜೋಡಿಸಿ ಲಸಿಕೆ ಪಡೆಯಬೇಕೆಂದು ಅವರು ಕರೆ ನೀಡಿದ್ದಾರೆ.

ವಾಟ್ಸ್‌ಅಪ್ ಮುಂತಾದ ಮಾಧ್ಯಮಗಳಲ್ಲಿ ಲಸಿಕೆ ಕುರಿತು ಬರುವ ಸುಳ್ಳು ಸುದ್ದಿಗಳನ್ನು ನಂಬಬಾರದು. ಧೈರ್ಯದಿಂದ ಬಂದು ಲಸಿಕೆ ಹಾಕಿಸಿಕೊಂಡರೆ, ಮುಂದೆ ಸಂಭವಿಸಬಹುದಾದ ಹಾನಿಯಿಂದ ರಕ್ಷಿಸಿಕೊಳ್ಳಬಹುದು ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಹನುಮಂತರಾಯ, ಕೊರೊನಾ ಲಸಿಕೆ ಅತ್ಯಂತ ಸುರಕ್ಷಿತವಾಗಿದೆ. ಲಸಿಕೆಯಿಂದ ಕೊರೊನಾ ಎದುರಿಸುವ ಶಕ್ತಿ ಸಿಗುವ ಸಂಪೂರ್ಣ ವಿಶ್ವಾಸ ನನಗಿದೆ. ಎಲ್ಲರೂ ಧೈರ್ಯವಾಗಿ ಬಂದು ಲಸಿಕೆ ಹಾಕಿಸಿಕೊಳ್ಳಬೇಕೆಂದು ಕರೆ ನೀಡಿದ್ದಾರೆ.

ನರ್ಸ್‌ಗಳಾದ ಶಾರದ, ನಿರ್ಮಲ, ಜಯಮ್ಮ ಹಾಗೂ ಫ್ಲಾರೆನ್ಸ್ ಅವರು ಜಿಲ್ಲಾಧಿಕಾರಿ ಹಾಗೂ ಎಸ್ಪಿಗೆ ಲಸಿಕೆ ನೀಡಿದರು. ಈ ಸಂದರ್ಭದಲ್ಲಿ ಡಿ.ಹೆಚ್.ಓ. ಡಾ. ನಾಗರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಆರ್.ಎಂ.ಓ. ಡಾ. ಎಂ.ಎಲ್. ಪಾಟೀಲ್, ಜಿಲ್ಲಾ ಮಲೇರಿಯಾ ಯೋಜನಾಧಿಕಾರಿ ಡಾ. ನಟರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಪಟಿಯಾಲಾದಲ್ಲಿ ರಾತ್ರಿ ಕರ್ಫ್ಯೂ

ಪಟಿಯಾಲ (ಪಂಜಾಬ್), ಮಾ. 11 – ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪಂಜಾಬ್‌ನ ಪಟಿಯಾಲಾದಲ್ಲಿ ರಾತ್ರಿ ಕರ್ಫ್ಯೂ ಹೇರಲಾಗಿದೆ. ಶುಕ್ರವಾರದಿಂದ ಜಾರಿಗೆ ಬರುವಂತೆ ರಾತ್ರಿ 11 ಗಂಟೆಯಿಂದ ಬೆಳಿಗ್ಗೆ 5 ಗಂಟೆಯವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ ಎಂದು ಜಿಲ್ಲಾ ಆಡಳಿತ ತಿಳಿಸಿದೆ. ಆದರೆ, ಅಗತ್ಯ ಸೇವೆಗಳಿಗೆ ರಾತ್ರಿ ಕರ್ಫ್ಯೂದಿಂದ ವಿನಾಯಿತಿ ನೀಡಲಾಗಿದೆ.

## ಶ್ರೀ ವಿಠ್ಠಲ ಮಂದಿರದಲ್ಲಿ ಇಂದು ರಥೋತ್ಸವ

ಮಹಾರಾಜಪೇಟೆಯ ಶ್ರೀ ವಿಠ್ಠಲ ಮಂದಿರದಲ್ಲಿ ಇಂದು ಬೆಳಿಗ್ಗೆ 9 ಕ್ಕೆ ಭಜನೆಯೊಂದಿಗೆ, ಕುಂಭಾಭಿಷೇಕ, ಶ್ರೀ ವಿಠ್ಠಲ ರುಕ್ಮಾಯಿ ದೇವರ ರಥೋತ್ಸವ ನಡೆಯಲಿದೆ. ರಥೋತ್ಸವದ ಮೆರವಣಿಗೆ ಚೌಕಿಪೇಟೆ, ದೊಡ್ಡಪೇಟೆ, ಎಸ್.ಕೆ.ಪಿ. ರಸ್ತೆ, ದುರ್ಗಾಂಬಿಕ ಸರ್ಕಲ್ ಮತ್ತು ಹಗೆದಿಬ್ಬ ಸರ್ಕಲ್ ಮೂಲಕ ದೇವಸ್ಥಾನಕ್ಕೆ ಬರುವುದು ಎಂದು ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ) 7 ಯ ಕಾರ್ಯದರ್ಶಿ ತಿಳಿಸಿದ್ದಾರೆ.

## ದಾದಿ ಹೃದಯ ಮೋಹಿನಿ ನಿಧನ

(1ನೇ ಪುಟದಿಂದ) ಬ್ರಹ್ಮಾಕುಮಾರಿ ಸಂಸ್ಥೆಯ ವಕ್ತಾರರು ಹೇಳಿದ್ದಾರೆ.

ಮಾಜಿ ಮುಖ್ಯಸ್ಥರಾಗಿದ್ದ ದಾದಿ ಜಾನಕಿ ಅವರು ವರ್ಷದ ಹಿಂದೆ ನಿಧನರಾದ ನಂತರ ದಾದಿ ಹೃದಯ ಮೋಹಿನಿ ಅವರನ್ನು ಸಂಘಟನೆಯ ಮುಖ್ಯ ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು ಎಂದು ವಕ್ತಾರರು ತಿಳಿಸಿದ್ದಾರೆ. ಅವರ ಕಳೇಬರವನ್ನು ಅಬು ರಸ್ತೆಯಲ್ಲಿರುವ ಕೇಂದ್ರ ಕಚೇರಿಗೆ ತರಲಾಗುವುದು. ಅಲ್ಲಿ ಸಾರ್ವಜನಿಕರು ರಾಜಯೋಗಿನಿಗೆ ಅಂತಿಮ ನಮನ ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗುವುದು. ಮಾರ್ಚ್ 13ರಂದು ಅಂತ್ಯಕ್ರಿಯೆ ನೆರವೇರಲಿದೆ.

# ಪ್ರೀತಿಯಿಂದ ಓದಿದರೆ ಸಾಧನೆ ಮಾಡಲು ಸಾಧ್ಯ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಒತ್ತಡ ನಿರ್ವಹಣೆ ಕುರಿತು ನಡೆದ ಉಪನ್ಯಾಸದಲ್ಲಿ ಗೋವಿಂದಪ್ಪ




ದಾವಣಗೆರೆ, ಮಾ. 11 - ಭಯ ಮತ್ತು ಆಸೆಯ ಒತ್ತಡದಿಂದ ಓದದೆ ಪ್ರೀತಿಯಿಂದ ಓದಿದರೆ ಜ್ಞಾನ ವೃದ್ಧಿಯಾಗಿ ಬಹುದೊಡ್ಡ ಸಾಧನೆ ಮಾಡಲು ಸಾಧ್ಯ ಎಂದು ದಾವಣಗೆರೆ ವಿವಿಯ ವಾಣಿಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಗೋವಿಂದಪ್ಪ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಒತ್ತಡ ನಿರ್ವಹಣೆ ವಿಷಯ ಕುರಿತು ನಿನ್ನೆ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಸಂಶೋಧನೆಗಳ ಪ್ರಕಾರ ಒತ್ತಡಕ್ಕೆ ನಮ್ಮ ಸುತ್ತಮುತ್ತಲ ಪರಿಸರ ನಾವು ಇರುವ ಅಥವಾ ಕೆಲಸ ಮಾಡುವ ಸಂಸ್ಥೆ ಅಥವಾ ಮನೆ ಹಾಗೂ ನಮ್ಮ ವೈಯಕ್ತಿಕ ಕಾರಣಗಳು ಕಾರಣವಾಗುತ್ತವೆ ಎಂದು ಹೇಳಿದರು.

ಒತ್ತಡ ನಿರ್ವಹಣೆ ಮಾಡಲು ಪ್ರತಿನಿತ್ಯ ದೈಹಿಕ ವ್ಯಾಯಾಮ, ಶಾಂತ ಸ್ವಭಾವ ಹಾಗೂ ಧ್ಯಾನ ಮಾಡುವುದು ಒಳಿತು ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರಿ ಪ್ರಾಂಶುಪಾಲ ಪ್ರೊ.ಟಿ.ವೀರೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊ. ಶಂಕರ್ ಆರ್. ಶೀಲಿ, ಪ್ರೊ ಮಂಜಣ್ಣ, ಪ್ರೊ. ದಾದಾಪೀರ್ ನವಿಲೇಹಾಳ್, ಪ್ರೊ. ಜಯಣ್ಣ, ಮರುಳಸಿದ್ದಪ್ಪ, ನಾಗರಾಜ, ಚನ್ನಬಸಪ್ಪ, ಶಂಭುಲಿಂಗಪ್ಪ, ಶಿವಕುಮಾರ್ ಕಂಪ್ಲಿ, ಗುರುಮೂರ್ತಿ, ಕೆ. ಶ್ಯಾಮಲ, ಆರ್. ಯಶೋಧ, ಪ್ರೊ. ಗೋವಿಂದಪ್ಪ ಉಪಸ್ಥಿತರಿದ್ದರು.

ವಿಜಯಲಕ್ಷ್ಮಿ ಪ್ರಾರ್ಥಿಸಿದರು. ನಿರ್ವಹಣಾ ಶಾಸ್ತ್ರದ ಪ್ರಾಧ್ಯಾಪಕಿ ಅಮೂಲ್ಯ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಮಂಜುನಾಥ್ ಅತಿಥಿಗಳನ್ನು ಪರಿಚಯಿಸಿದರು. ಪ್ರೊ. ವೆಂಕಟೇಶ್ ಬಾಬು ವಂದಿಸಿದರು.

## ಮಲೇಬೆನ್ನೂರಿನಲ್ಲಿ ಶಾಂತಿಯಾತ್ರೆ




ಮಲೇಬೆನ್ನೂರು, ಮಾ.11- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಪಟ್ಟಣದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಸದ್ಭಾವನಾ ಶಾಂತಿಯಾತ್ರೆ ಹಾಗೂ ಬೆಳ್ಳಿ ರಥದಲ್ಲಿ 8 ಅಡಿ ಎತ್ತರದ ಬೃಹತ್ ಶಿವಲಿಂಗದ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.

ಡೊಳ್ಳು, ಸಮಾಳ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರವಣಿಗೆಗೆ ಮೆರಗು ತಂದವು. ಮುಂಡಗೋಡು ಕೇಂದ್ರದ ಬ್ರಹ್ಮಾಕುಮಾರಿ ಗಂಗಾಂಬಿಕೆ, ಮಲೇಬೆನ್ನೂರು ಕೇಂದ್ರದ ಬ್ರಹ್ಮಾಕುಮಾರಿ ಮಂಜುಳಾ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಎ.ಎಸ್.ಐ. ಬಸವರಾಜಪ್ಪ ನೇತೃತ್ವದಲ್ಲಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ರಾತ್ರಿ ಜಾಗರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

## ಇಂದು ನಗರದ ಮಾರ್ಕಂಡೇಶ್ವರ ಸ್ವಾಮಿಯ ಮೆರವಣಿಗೆ

ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ 7.30 ಕ್ಕೆ ಮಹಾಶಿವರಾತ್ರಿಯ ಅಂಗವಾಗಿ ಶ್ರೀ ಸ್ವಾಮಿಯ ಮೆರವಣಿಗೆ ರಾಜಬೀದಿಗಳಲ್ಲಿ ನಡೆಯಲಿದೆ. ನಂತರ ಮಧ್ಯಾಹ್ನ 12 ಗಂಟೆಗೆ ತುಮ್ಮಿನಕಟ್ಟೆಯ ಶ್ರೀ ಪ್ರಭುಲಿಂಗ ಸ್ವಾಮೀಜಿ ಅವರಿಂದ ಆಶೀರ್ವಚನ ನಡೆಯುವುದು.

ಸಂಘದಿಂದ ನಡೆಸಿದ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ.

ಮಧ್ಯಾಹ್ನ 1.30 ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸರ್ವ ಭಕ್ತಾದಿಗಳು ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಲು ಸಮಾಜದ ಪರವಾಗಿ ಶ್ರೀಕಾಂತೇಶ್ ಪೊರಾಳ್ ತಿಳಿಸಿದ್ದಾರೆ.

## ಉಲ್ಬಣಿಸಿದ ಕೊರೊನಾ ಸೋಂಕು

(1ನೇ ಪುಟದಿಂದ) ಕಾರಣಗಳಿಂದಾಗಿ ಮತ್ತು ಕೊರೊನಾ ಕುರಿತು ಮುನ್ನೆಚ್ಚರಿಕೆ ವಹಿಸದ ಹಾಗೂ ಹೆಚ್ಚಿನ ಜನಸಂದಣಿಯಾಗುತ್ತಿರುವ ಕಾರಣ ಸೋಂಕು ಹರಡುತ್ತಿದೆ ಎಂದವರು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ರಾಜ್ಯದ ಕೆಲವೆಡೆ ಕಠಿಣ ಕೊರೊನಾ ನಿರ್ಬಂಧಗಳನ್ನು ಹೇರಲಾಗುವುದು ಎಂದಿದ್ದಾರೆ. ರಾಜ್ಯದಲ್ಲಿ ಒಂದೇ ದಿನ 13,659 ಸೋಂಕುಗಳು ಕಂಡು ಬಂದಿವೆ. ಇದು ಈ ವರ್ಷ ರಾಜ್ಯದಲ್ಲಿ ಒಂದೇ ದಿನ ಕಂಡು ಬಂದ ಅತಿ ಹೆಚ್ಚಿನ ಸೋಂಕು.

ಕಳೆದ ತಿಂಗಳಿನಿಂದ ನಿರಂತರವಾಗಿ ಹೆಚ್ಚು ಪ್ರಕರಣಗಳು ಕಂಡು ಬರುತ್ತಿರುವ ನಾಗಪುರದಲ್ಲಿ ಮಾರ್ಚ್ 15ರಿಂದ 21ರವರೆಗೆ ಲಾಕ್‌ಡೌನ್ ಹೇರಿಕೆ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ನಿತಿನ್ ರಾವತ್ ತಿಳಿಸಿದ್ದಾರೆ. ಲಾಕ್‌ಡೌನ್ ಅವಧಿಯಲ್ಲಿ ಖಾಸಗಿ ಕಚೇರಿಗಳು ಮುಚ್ಚಿರುತ್ತವೆ. ಸರ್ಕಾರಿ ಕಚೇರಿಗಳಲ್ಲಿ ಶೇ.25ರಷ್ಟು ಜನ ಮಾತ್ರ ಕಾರ್ಯ ನಿರ್ವಹಿಸಲಿದ್ದಾರೆ. ಅಗತ್ಯ ಸರಕುಗಳನ್ನು ಮಾರುವ ಅಂಗಡಿಗಳು ತೆರೆದಿರುತ್ತವೆ. ಆನ್‌ಲೈನ್ ಮೂಲಕ ಮದ್ಯದ ಮಾರಾಟವಿರುತ್ತದೆ.

ಗುಜರಾತ್, ಮಧ್ಯ ಪ್ರದೇಶ ಹಾಗೂ ಹರಿಯಾಣಗಳಲ್ಲಿ ಪರಿಸ್ಥಿತಿ ಉಲ್ಬಣಿಸುತ್ತಿವೆ. ಇಲ್ಲಿ ಸದ್ಯಕ್ಕೆ ಹೆಚ್ಚಿನ ಪ್ರಕರಣಗಳು ಕಂಡು ಬರುತ್ತಿಲ್ಲವಾದರೂ, ಮುಂದಿನ ದಿನಗಳಲ್ಲಿ ಸೋಂಕು ಏರಿಕೆಯಾಗುವ ಸಾಧ್ಯತೆ ಇದೆ ಎಂದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಈ ರಾಜ್ಯಗಳು ಸೋಂಕು ತಡೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದಿದ್ದಾರೆ.

## ವ್ಯಾಯಾಮದಿಂದ ಖರ್ಚಿಲ್ಲದೇ ಲಾಭ

(1ನೇ ಪುಟದಿಂದ) ಎಂದರು.

ದೈಹಿಕ ಕಸರತ್ತು ಕೇವಲ ಕ್ರೀಡಾಕೂಟಕ್ಕೆ ಸೀಮಿತವಾಗಬಾರದು. ಪ್ರತಿನಿತ್ಯ ಕನಿಷ್ಠ ಅರ್ಧ ಗಂಟೆ ನಡಿಗೆ, ಓಟ, ಟ್ರೆಡ್‌ಮಿಲ್, ಈಜು ರೀತಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು ಎಂದವರು ಕಿವಿಮಾತು ಹೇಳಿದರು.

ನಿರಂತರ ವ್ಯಾಯಾಮದಿಂದ ರೋಗ ನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ. ಇದರಿಂದ ನಾಯಕತ್ವದ ಗುಣ ಸಿಗುತ್ತದೆ. ಸೋಲನ್ನು ಎದುರಿಸುವ ಸಾಮರ್ಥ್ಯ ಲಭ್ಯವಾಗುತ್ತದೆ ಎಂದೂ ಅವರು ತಿಳಿಸಿದರು.

ವಿಶೇಷ ಆಹ್ವಾನಿತರಾಗಿ ಮಾತನಾಡಿದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಶಿಸ್ತು ಹಾಗೂ ಆದೇಶ ಪಾಲನೆಗೆ ಹೆಸರಾಗಿದ್ದ ಪೊಲೀಸ್ ಇಲಾಖೆ ಈಗ ಸಂಯಮ ಹಾಗೂ ಜನಸ್ನೇಹಿ ಗುಣಗಳನ್ನು ಮೈಗೂಡಿಸಿಕೊಂಡಿದೆ. ಇದು ಒಳ್ಳೆಯ ಬೆಳವಣಿಗೆ ಎಂದು ತಿಳಿಸಿದರು. ಒತ್ತಡ ನಿವಾರಣೆಗೆ ಕ್ರೀಡೆ ಉಪಯುಕ್ತ. ವ್ಯಾಯಾಮದಿಂದ ಒಳ್ಳೆಯ ವಿಚಾರ ಹಾಗೂ ಆಲೋಚನೆಗಳು ಬರುತ್ತವೆ ಎಂದ ಅವರು, ಸ್ಮಾರ್ಟ್ ಸಿಟಿ ವತಿಯಿಂದ ಪೊಲೀಸ್ ಇಲಾಖೆಗೆ ಮೂರು ಮಲ್ಟಿ ಸರ್ವೈಲೆನ್ಸ್ ವಾಹನಗಳನ್ನು ಒದಗಿಸಲಾಗಿದೆ. ಇನ್ನು ಒಂಭತ್ತು ತಿಂಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಪಕ್ಕದಲ್ಲಿ ಇಡೀ ನಗರದ ಮೇಲೆ ನಿಗಾ ವಹಿಸುವ ನಿಯಂತ್ರಣ ಕೇಂದ್ರ ಸ್ಥಾಪನೆಯಾಗಲಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸ್ವಾಗತಿಸಿದರೆ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ. ರಾಜೀವ್ ವಂದಿಸಿದರು. ದೇವರಾಜ ಸಂಗೇನಹಳ್ಳಿ ಮತ್ತು ಶೈಲಜಾ ನಿರೂಪಿಸಿದರು.

# ಸಾಸಲವಾಡ : ನಾರುತ್ತಿರುವ ಕಾಲುವೆ



## ಹಳ್ಳ ಹಿಡಿದಿರುವ ಸ್ವಚ್ಛ ಭಾರತ ಮಿಷನ್

ಕೂಡ್ಲಿಗಿ, ಮಾ.11- ತಾಲ್ಲೂಕಿನ ಹಿರೇಹೆಗ್ಡಾಳು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಾಸಲವಾಡ ಗ್ರಾಮದಲ್ಲಿ ಪ್ರಧಾನ ಮಂತ್ರಿಗಳ ಸ್ವಚ್ಛ ಭಾರತ ಮಿಷನ್ ಹಳ್ಳ ಹಿಡಿದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಗ್ರಾಮದ ಮಧ್ಯದಲ್ಲಿಯೇ ಬಹುತೇಕ ಕಡೆ ತಿಪ್ಪೆಗಳಿದ್ದು, ಅವು ಮಕ್ಕಳ ಶೌಚಾಲಯಗಳಾಗಿವೆ ಎನ್ನುತ್ತಾರೆ ಗ್ರಾಮಸ್ಥರು. ಮನೆಯಂಗಳದಲ್ಲಿನ ಕಾಲುವೆಗಳನ್ನು ಕೆಲ ವರ್ಷಗಳಿಂದ ಸ್ವಚ್ಛಗೊಳಿಸಿಲ್ಲ. ಕಾಲುವೆಗಳು ಕಸ ತುಂಬಿ ದುರ್ನಾತ ಬೀರುತ್ತಿವೆ, ಹುಳುಗಳಿಂದ ತುಂಬಿವೆ. ಗ್ರಾಮದ ಬಹುತೇಕ ಕಡೆಗಳಲ್ಲಿ ಮನೆಯಂಗಳದಲ್ಲಿಯೇ ತಿಪ್ಪೆಗಳಿವೆ ಮತ್ತು ಮಕ್ಕಳು ತಿಪ್ಪೆಗಳಲ್ಲಿಯೇ ಶೌಚಕ್ಕೆ ಕೂಡುತ್ತಿದ್ದಾರೆ.

ಪ್ರಧಾನಿಯವರ ಸ್ವಚ್ಛ ಭಾರತ ಮಿಷನ್‌ಅನ್ನು ಇಲ್ಲಿ ಗ್ರಾಪಂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಿಂಚಿತ್ತೂ ಗೌರವಿಸುತ್ತಿಲ್ಲ. ಕೇವಲ ಲೆಕ್ಕ-ಪತ್ರಗಳಿಗೆ ಸ್ವಚ್ಛತೆ ಅಭಿವೃದ್ಧಿ ತೋರಿಸುತಿದ್ದಾರೆ ಎಂದು ಗಂಭೀರವಾಗಿ ಆರೋಪಿಸಲಾಗಿದೆ. ಗ್ರಾಪಂನಲ್ಲಿ ಹಲವು ಭಾರೀ ಹಗರಣಗಳು ಜರುಗಿವೆ. ಅವುಗಳನ್ನು ಶೀಘ್ರದಲ್ಲಿಯೇ ಬಯಲಿಗೆಳೆದು, ಮಾಧ್ಯಮಗಳ ಮುಂದೆ, ಎಸಿಬಿಯವರಿಗೆ ದೂರು ನೀಡಲಾಗುವುದೆಂದು ಕೆಲ ಗ್ರಾಮಸ್ಥರು ಹಾಗು ಪ್ರಜ್ಞಾವಂತ ಯುವಕರು ದೂರಿದ್ದಾರೆ. ಕಾಲುವೆ, ತಿಪ್ಪೆಗಳು ಕೊಳೆತು ನಾರುತಿದ್ದು, ಇದರಿಂದಾಗಿ ಬಹುತೇಕ ಗ್ರಾಮಸ್ಥರಿಗೆ ರೋಗ ರುಜಿನಗಳು ಹಬ್ಬಿವೆ. ಗ್ರಾಮದ ಜನರು ನಿತ್ಯ ಅನಾರೋಗ್ಯದಿಂದ ಬಳಲುತ್ತಿದ್ದು ಗ್ರಾಮದ ಬಹುತೇಕ ಗ್ರಾಮಸ್ಥರು ಚಿಕಿತ್ಸೆಗೆಂದು ಆಸ್ಪತ್ರೆಗೆ ಅಲೆದಾಡುವಂತಾಗಿದೆ ಎಂದು ಗ್ರಾಮದ ಹಿರಿಯ ಮರುಳಸಿದ್ದಪ್ಪ ಸೇರಿದಂತೆ, ಹಲವು ಹಿರಿಯರು ದೂರಿದ್ದಾರೆ.

ಕಾಲುವೆ ನೀರು ನಿಂತ ಗುಂಡಿಗಳು ನಿರ್ಮಾಣವಾಗಿವೆ. ಪರಿಣಾಮ ಕೆಲ ಮನೆಗಳ ಪಾಯ ಕುಸಿಯುತ್ತಿವೆ. ಆಗೋ-ಈಗೋ ಬೀಳುವಂತಾಗಿವೆ. ಕಾರಣ ಶೀಘ್ರವೇ ಹೊಸದಾಗಿ ಕಾಲುವೆಯನ್ನು ಅಭಿವೃದ್ಧಿಪಡಿಸಬೇಕಿದೆ. ಕಾಲುವೆ ನೀರು ಗ್ರಾಮದಿಂದ ಹೊರಗೆ ಹರಿದು ಹೋಗುವಂತೆ ಶೀಘ್ರವೇ ಕ್ರಮ ಜರುಗಿಸಬೇಕಿದೆ ಮತ್ತು ಕಾಲುವೆ ಸ್ವಚ್ಛಗೊಳಿಸಬೇಕು. ಮನೆಯಂಗಳದಲ್ಲಿರುವ ಎಲ್ಲಾ ತಿಪ್ಪೆಗಳನ್ನು ಗ್ರಾಮದಿಂದ ಶೀಘ್ರವೇ ಆಚೆಗೆ ಹಾಕುವ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಈ ಮೂಲಕ ಒತ್ತಾಯಿಸಿದ್ದಾರೆ.

ಸಂಬಂಧಿಸಿದ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದ್ದರೂ ಪ್ರಯೋಜನವಾಗಿಲ್ಲ, ತಾಪಂ ಅಧಿಕಾರಿಗಳಿಗೂ ಹೇಳಲಾಗಿದೆ. ಅವರೂ ಸ್ಪಂದಿಸದೆ ಹಾರಿಕೆ ಉತ್ತರ ನೀಡುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಹೀಗೆ ನಿರ್ಲಕ್ಷ್ಯ ವಹಿಸಿದ್ದಲ್ಲಿ ಜಿಲ್ಲಾ ಪಂಚಾಯ್ತಿ ಅಧಿಕಾರಿಗಳಲ್ಲಿ ಸಾಕ್ಷಿ, ಪುರಾವೆಗಳ ಸಮೇತ ದೂರು ನೀಡಲಾಗುವುದು ಹಾಗೂ ಜಿಲ್ಲಾಧಿಕಾರಿಗಳಿಗೆ ಲಿಖಿತ ದೂರು ನೀಡಲಾಗುವುದು ಎಂದು ಗ್ರಾಮದ ಹಿರಿಯ ಮರುಳಸಿದ್ದಪ್ಪ ಸೇರಿದಂತೆ, ಗ್ರಾಮದ ಹಿರಿಯರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಗ್ರಾಮಸ್ಥರು ತಿಳಿಸಿದ್ದಾರೆ.


## ಇಂದು ಅನ್ನ ಸಂತರ್ಪಣೆ

ದಾವಣಗೆರೆ : ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಕಾರ್ಯಕ್ರಮದ ಅಂಗವಾಗಿ ಇಂದು ಮಧ್ಯಾಹ್ನ 12.30 ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸದ್ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಬೇಕೆಂದು ದೇವಸ್ಥಾನ ಟ್ರಸ್ಟ್ ತಿಳಿಸಿದೆ.

## ಇಂದು ರಥೋತ್ಸವ

ದಾವಣಗೆರೆ : ಹಳೇ ಬೇತೂರು ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದಲ್ಲಿ ಇಂದು ಸಂಜೆ 7 ಗಂಟೆಗೆ ರಥೋತ್ಸವ ಜರುಗಲಿದೆ. ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಬಿ.ಸಿ. ಉಮಾಪತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

## ಕಾಶೀಪುರ ಮಠದ ಪಾರ್ವತಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ, ಕಾವೇರಮ್ಮ ಶಾಲೆ ಹತ್ತಿರದ ವಾಸಿ, ದಿ|| ಕಾಶೀಪುರ ಮಠದ ಜಯದೇವಯ್ಯನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ (85) ಅವರು ದಿನಾಂಕ 11.03.2021ರ ಗುರುವಾರ ರಾತ್ರಿ 9 ಗಂಟೆಗೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.03.2021ರ ಶುಕ್ರವಾರ ಮಧ್ಯಾಹ್ನ 2.30 ಕ್ಕೆ ದಾವಣಗೆರೆ ತಾಲ್ಲೂಕು ಕಾಶೀಪುರದಲ್ಲಿ ನೆರವೇರಿಸಲಾಗುವುದು.

## ಭಾರತದಿಂದ ವಿಶ್ವಕ್ಕೆ ಒಳಿತು : ಮೋದಿ

(1ನೇ ಪುಟದಿಂದ) ಎಂದು ಮೋದಿ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿಶ್ವಕ್ಕೆ ಔಷಧಿಯ ಅಗತ್ಯವಿತ್ತು. ಇದಕ್ಕಾಗಿ ಸಾಧ್ಯವಿರುವ ಎಲ್ಲ ಕ್ರಮಗಳನ್ನು ಭಾರತ ತೆಗೆದುಕೊಂಡಿತು ಎಂದ ಪ್ರಧಾನಿ, ಕೊರೊನಾ ಲಸಿಕೆ ಪೂರೈಸಿದ್ದನ್ನು ಪ್ರಸ್ತಾಪಿಸಿದ್ದಾರೆ.

## ಅಕ್ರಮ ಸಾಗಾಣಿಕೆ: ಪಡಿತರ ಅಕ್ಕಿ ವಶ

ಹರಿಹರ, ಮಾ.11- ರಾಣೇಬೆನ್ನೂರಿನಿಂದ ತುಮಕೂರಿಗೆ ಅಕ್ರಮ ಸಾಗಾಣಿಕೆ ಮಾಡುತ್ತಿದ್ದ ನಂ.ಕೆಎ-15, 9853 ಲಾರಿಯನ್ನು ಹರಿಹರ ಬೈಪಾಸ್‌ನ ಹುಲ್ಲುಮನಿ ಕ್ರಷರ್ ಬಳಿ ಆಹಾರ ಇಲಾಖೆ ಮತ್ತು ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆಯಲ್ಲಿ ಹಿಡಿದು, ಅದರಲ್ಲಿದ್ದ 150 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ಜಿಲ್ಲೆಯ ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಮಾರ್ಗದರ್ಶನದಲ್ಲಿ ಹಾಗೂ ಹರಿಹರ ಸಿಪಿಐ ಯು. ಸತೀಶ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತಾಲ್ಲೂಕಿನ ಆಹಾರ ಶಿರಸ್ತೇದಾರ್ ಯು.ಆರ್. ರಮೇಶ್, ಗ್ರಾಮಾಂತರ ಎಎಸ್‌ಐ ಮಹಮ್ಮದ್ ಸೈಫುದ್ದೀನ್, ಸಿಬ್ಬಂದಿಗಳಾದ ಹನುಮಂತಪ್ಪ, ವೆಂಕಟೇಶ್ ಮತ್ತು ಮಹಮ್ಮದ್ ರಸೂಲ್ ಪಾಲ್ಗೊಂಡಿದ್ದರು.

## ಕುಂಬಳೂರು ಗ್ರಾಮದ ಕೆಂಚಪ್ಳರ ಮುರುಗೇಶಪ್ಪ ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ

**ಕೆಂಚಪ್ಳರ ಮುರುಗೇಶಪ್ಪ** (67 ವರ್ಷ)

ಅವರು ದಿನಾಂಕ 11.03.2021 ರ ಗುರುವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.03.2021 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕುಂಬಳೂರು ಗ್ರಾಮದಲ್ಲಿ ನೆರವೇರಲಿದೆ.

**ದುಃಖಿತಪ್ತರು: ಕೆಂಚಪ್ಳರ ವಂಶಸ್ಥರು, ಕುಂಬಳೂರು ಹಾಗೂ ಬಂಧು-ಮಿತ್ರರು.**

## ಕೂಡ್ಲಿಗಿಯಲ್ಲಿ ಹಾಡಹಗಲೇ ಮನೆ ಬೀಗ ಮುರಿದು ಕಳುವು

ಕೂಡ್ಲಿಗಿ, ಮಾ.11- ಮನೆಗೆ ಬೀಗ ಹಾಕಿಕೊಂಡು ಕೆಲಸಕ್ಕೆ ಹೋದದ್ದನ್ನು ಗಮನಿಸಿದ ಕಳ್ಳರು ಬೀಗ ಮುರಿದು ಒಳಗಿದ್ದ ಗಾಡ್ರೇಜ್ ಲಾಕರ್ ಮುರಿದು ಅದರಲ್ಲಿದ್ದ 2.60 ಲಕ್ಷ ರೂ ಬೆಲೆಬಾಳುವ ಬಂಗಾರದೊಡವೆಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವ ಘಟನೆ ಬುಧವಾರ ಮಧ್ಯಾಹ್ನ ಪಟ್ಟಣದ ಬಾಪೂಜಿ ನಗರದ 2ನೇ ವಾರ್ಡಿನಲ್ಲಿ ಹಾಡಹಗಲೇ ಜರುಗಿದೆ.

ವಿಮಲಾಕ್ಷಿ, ನಾಗರಾಜ ಎಂಬುವವರು ಕೂಡ್ಲಿಗಿಯ ಆಂಬ್ಯುಲೆನ್ಸ್‌ನಲ್ಲಿ ಎಎನ್‌ಎಂ ಆಗಿದ್ದು, ಕೆಲಸಕ್ಕೆಂದು ಬುಧವಾರ ಬೆಳಿಗ್ಗೆ 10.20 ಗಂಟೆಗೆ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದಾರೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಸೇವೆ ಸಲ್ಲಿಸುತ್ತಿರುವ ಅವರ ತಂಗಿ ವೇದಾವತಿ ಮಧ್ಯಾಹ್ನ 1 ಗಂಟೆಗೆ ಊಟಕ್ಕೆಂದು ಮನೆಗೆ ಬಂದು ನೋಡಲಾಗಿ, ಮನೆ ಬಾಗಿಲಿಗೆ ಹಾಕಿದ್ದ ಬೀಗ ಇರಲಿಲ್ಲ. ಒಳಗೆ ಗಾಡ್ರೇಜ್ ಬಾಗಿಲು ತೆರೆದಿದ್ದು ಅದರಲ್ಲಿದ್ದ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಬ್ಯಾಗೊಂದರಲ್ಲಿ ಇಟ್ಟಿದ್ದ ಬಂಗಾರದೊಡವೆಗಳು ಇರಲಿಲ್ಲ ಎಂದಿದ್ದಾರೆ.

ತಕ್ಷಣ ಅಕ್ಕನಿಗೆ ಮಾಹಿತಿ ತಿಳಿಸಿ ನಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಕೂಡ್ಲಿಗಿ ಎಎಸ್ ಐ ರುದ್ರಮುನಿ ಮತ್ತು ಸಿಬ್ಬಂದಿ ಕಳುವಾಗಿರುವ ಬಂಗಾರದ ಆಭರಣಗಳ ಮಾಹಿತಿ ಪಡೆದುಕೊಂಡು, ಪೊಲೀಸ್ ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕರೆಸಿ ಹೆಚ್ಚಿನ ತನಿಖಾ ಮಾಹಿತಿ ಕಲೆಹಾಕಿದ್ದಾರೆ.

ವಿಮಲಾಕ್ಷಿ ನಾಗರಾಜ್ ನೀಡಿದ ದೂರಿನಂತೆ 2.60 ಲಕ್ಷ ರೂ ಬೆಲೆಬಾಳುವ ಬಂಗಾರದ ಆಭರಣಗಳಾದ 35 ಗ್ರಾಂ ಮಾಂಗಲ್ಯ ಚೈನ್, 15 ಗ್ರಾಂ ನೆಕ್ಲೇಸ್, 12 ಗ್ರಾಂ 3 ಜೊತೆ ಕಿವಿಯೋಲೆ ಹಾಗೂ 3 ಗ್ರಾಂ ನ ಬಂಗಾರದ 3 ಗುಂಡುಗಳು, ಒಂದು ತಾಳಿಬೊಟ್ಟು, ಕಿವಿಗೆ ಹಾಕುವ ಒಂದು ಸೈಡ್ ಚೈನ್ ಕಳುವಾಗಿದೆ ಎಂದು ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ನಾಗಬಸಪ್ಪ ನಿಧನಕ್ಕೆ ಸಂತಾಪ

ದಾವಣಗೆರೆ, ಮಾ.11- ತಾಲ್ಲೂಕಿನ ಎಲೆಬೇತೂರು ಗ್ರಾಮದ ದಿ|| ಮಾಳಿಗೇರ ಚನ್ನಪ್ಪನವರ ಪುತ್ರ ಎಪಿಎಂಸಿ ವರ್ತಕ ಎಂ. ನಾಗಬಸಪ್ಪನವರ ನಿಧನಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ಹರಿಹರದಲ್ಲಿ ಭಕ್ತಿಪೂರ್ವಕ ಶಿವರಾತ್ರಿ ಆಚರಣೆ



ಹರಿಹರ, ಮಾ.11- ನಗರದಲ್ಲಿ ಮಹಾ ಶಿವರಾತ್ರಿ ಹಬ್ಬವನ್ನು ಭಕ್ತಿ ಪೂರ್ವಕವಾಗಿ ಆಚರಣೆ ಮಾಡಲಾಯಿತು.

ಐತಿಹಾಸಿಕ ಪ್ರಸಿದ್ಧ ಶ್ರೀ ಹರಿಹರೇಶ್ವರ, ಶ್ರೀ ಮಹಾಲಕ್ಷ್ಮಿ, ನೂರ ಎಂಟು ಲಿಂಗೇಶ್ವರ, ಗಣಪತಿ, ಲಕ್ಷ್ಮಿ ವೆಂಕಟೇಶ್ವರ, ಕುಂಬಳೇಶ್ವರ, ಆಂಜನೇಯ, ಸುಬ್ರಹ್ಮಣ್ಯ, ಗ್ರಾಮದೇವತೆ ಊರಮ್ಮ, ಸಾಯಿಬಾಬಾ, ಜೋಡು ಬಸವೇಶ್ವರ, ವೀರಭದ್ರೇಶ್ವರ, ರೇವಣಸಿದ್ದೇಶ್ವರ, ಅಯ್ಯಪ್ಪ ಸ್ವಾಮಿ, ರಾಘವೇಂದ್ರ ಸ್ವಾಮಿ ಮಠ ಸೇರಿದಂತೆ, ಹಲವಾರು ದೇವಸ್ಥಾನಗಳಲ್ಲಿ ಕಾಶಿಯಿಂದ ಬಂದಂತಹ ಪವಿತ್ರ ಗಂಗಾಜಲವನ್ನು ಹಾಕಿ ವಿಶೇಷ ಅಭಿಷೇಕ ಮಾಡಲಾಯಿತು.

ಹೋಮ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಿತು. ನಗರದ ಪ್ರಸಿದ್ಧ ನೂರ ಎಂಟು ಲಿಂಗೇಶ್ವರ ಸ್ವಾಮಿಗೆ ತುಂಗಭದ್ರಾ ನದಿಯಿಂದ ನೀರನ್ನು ತಂದು ಅಭಿಷೇಕ ಮಾಡಿ ನಂತರದಲ್ಲಿ ಮಹಾಮಂಗಳಾರತಿ ಮಾಡಲಾಯಿತು.

ಶಿವರಾತ್ರಿ ಹಬ್ಬದಂದು ಅಜ್ಞಾನವನ್ನು ಕಳೆದು, ಸುಜ್ಞಾನದ ದೀವಿಗೆ ಬೆಳಗುವಂತೆ ಮಾಡುವುದಕ್ಕೆ ಶಿವನನ್ನು ಆರಾಧನೆ ಮಾಡಲಾ ಗುತ್ತದೆ. ಶಿವನಿಗೆ ಅತೀ ಶ್ರೇಷ್ಠವಾದ ಬಿಲ್ವಪತ್ರೆ ಅರ್ಪಿಸಿ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನನ್ನು ರಾತ್ರಿ ಭಜಿಸಿದರೆ ಅನೇಕ ಪಾಪಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ ಎನ್ನುವುದು ರೂಢಿಯಲ್ಲಿದೆ.

ದೇವಸ್ಥಾನ ಮತ್ತು ಗರ್ಭಗುಡಿಯನ್ನು ವಿವಿಧ ಬಗೆಯ ಹೂವಿನಿಂದ ಅಲಂಕರಿಸಲಾಗಿತ್ತು. ದೇವರ ದರ್ಶನಕ್ಕೆ ಅನುಕೂಲವಾಗುವಂತೆ ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ತಮ್ಮ ಕುಟುಂಬ ಸಮೇತರಾಗಿ ನಗರದ ಎಲ್ಲಾ ದೇವಸ್ಥಾನಗಳಲ್ಲಿ ಬೆಳಗ್ಗೆಯಿಂದ ತಡ ರಾತ್ರಿವರೆಗೂ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಮಾಡಿ ಆಶೀರ್ವಾದ ಪಡೆದರು. ಕೊರೊನಾ ಸಮಸ್ಯೆ ತಡೆಗಟ್ಟಲು ದೇವಸ್ಥಾನದ ಬಾಗಿಲ ಬಳಿ ಸ್ಯಾನಿಟೈಸರ್ ಸಿಂಪಡಣೆ ಮಾಡಲಾಗಿತ್ತು. ಕಡ್ಡಾಯವಾಗಿ ಮಾಸ್ಕ್ ಧರಿಸುವವಂತೆ ನಾಮಫಲಕ ಹಾಕಲಾಗಿತ್ತು.

ಶಿವರಾತ್ರಿ ಹಬ್ಬದಂದು ಫಲಹಾರ ಹಾಗೂ ಹಣ್ಣುಗಳನ್ನು ಸ್ವೀಕರಿಸುವುದರಿಂದ ಮಾರುಕಟ್ಟೆಯಲ್ಲಿ ಹಣ್ಣುಗಳನ್ನು ಖರೀದಿಸಲು ಜನರು ಮುಗಿಬಿದ್ದಿದ್ದರು. ಕಲ್ಲಂಗಡಿ, ಸೇಬು, ಚಿಕ್ಕು, ದ್ರಾಕ್ಷಿ, ಉತ್ತತ್ತಿ, ಮುಂತಾದ ಹಣ್ಣುಗಳನ್ನು ಖರೀದಿಸಿ ಪೂಜೆಯ ನಂತರದಲ್ಲಿ ಸಿಹಿ ತಿನಿಸುಗಳ ಜೊತೆಗೆ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಶ್ರೀ ಹರಿಹರೇಶ್ವರ ದೇವಸ್ಥಾನದ ಅರ್ಚಕರಾದ ಶ್ರೀನಿವಾಸಮೂರ್ತಿ, ಗುರುಪ್ರಸಾದ್, ಚಂದ್ರಕಾಂತ, ಶೇಷಾಚಲ, ಗ್ರಾಮದೇವತೆ ದೇವಸ್ಥಾನದ ನಾಗರಾಜ್, ನೂರಾ ಎಂಟು ಲಿಂಗೇಶ್ವರ ದೇವಸ್ಥಾನದ ಹಾವನೂರು ಮಹಾರುದ್ರಪ್ಪ, ಹಿರೇಬಿದರಿ ಬಸವರಾಜಪ್ಪ, ಕುಂಬಳೇಶ್ವರ ದೇವಸ್ಥಾನದ ಈರಣ್ಣ ಬೇಲೂರು, ಸಾಯಿಬಾಬಾ ಮಂದಿರದ ಕುಮಾರ್ ಸ್ವಾಮಿ, ರಾಘವೇಂದ್ರ ಮಠದ ಪವನ್ ಕುಮಾರ್ ಇನ್ನಿತರರು ಹಾಜರಿದ್ದರು.

# ಇಷ್ಟಲಿಂಗ ಪೂಜೆಯಿಂದ ಬೌದ್ಧಿಕ, ಅಧ್ಯಾತ್ಮಿಕ, ನೈತಿಕ, ದೈಹಿಕ ಆರೋಗ್ಯ ವೃದ್ಧಿ



**ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮದಲ್ಲಿ ಪಂಡಿತಾರಾಧ್ಯ ಶ್ರೀಗಳು**

ಸಾಣೇಹಳ್ಳಿ, ಮಾ. 11- ಪ್ರತಿನಿತ್ಯ ಲಿಂಗಪೂಜೆ ಮಾಡುವುದರಿಂದ ವ್ಯಕ್ತಿಯಲ್ಲಿ ಏಕಾಗ್ರತೆ, ಸಾಮಾಜಿಕ ಎಚ್ಚರಿಕೆ, ಸೂಕ್ಷ್ಮತೆಗಳ ಅರಿವಾಗುಗುತ್ತದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಅವರು ಶಿವರಾತ್ರಿ ನಿಮಿತ್ತ ಸಾಣೇಹಳ್ಳಿ ಶ್ರೀಮಠದ ಚನ್ನಬಸವ ಸದನದಲ್ಲಿ ಏರ್ಪಡಿಸಿದ್ದ ಸಾಮೂಹಿಕ ಇಷ್ಟಲಿಂಗ ಪೂಜೆಯ ಸಾನ್ನಿಧ್ಯ ಹಾಗೂ ಶಿವ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ, ಶರಣರು ದೇವರನ್ನು ಹುಡುಕಿಕೊಂಡು ದೂರದ ದೇವಸ್ಥಾನಗಳಿಗೆ ಹೋಗುವುದನ್ನು ಒಪ್ಪುವುದಿಲ್ಲ ಎಂದರು.

ದೇವರು ನಮ್ಮನ್ನು ಬಿಟ್ಟು ಬೇರೆಡೆ ಇಲ್ಲ. ನಾವಿದ್ದಲ್ಲಿಯೇ ಇಷ್ಟಲಿಂಗ ಪೂಜೆಯ ಮೂಲಕ ದೇವರನ್ನು ಪೂಜಿಸಬಹುದು. ಇದರಿಂದ ಮನುಷ್ಯನ ಬೌದ್ಧಿಕ, ಅಧ್ಯಾತ್ಮಿಕ, ನೈತಿಕ, ದೈಹಿಕ ಆರೋಗ್ಯ ಹೆಚ್ಚುವುದು. ಶರಣರು ಹೇಳುವ ಧರ್ಮದ ಹಾದಿಯಲ್ಲಿ ನಡೆದರೆ ಆರೋಗ್ಯ, ನೆಮ್ಮದಿ, ಸಕಲ ಸುಖ ಸಂಪತ್ತುಗಳು ನಮ್ಮ ಕೈವಶವಾಗುವವಲ್ಲದೆ ಬದುಕು ಸಾರ್ಥಕವಾಗುವುದು ಎಂದರು.

ಹಿರಿಯ ಜಗದ್ಗುರುಗಳಾದ ಲಿಂ. ಶಿವಕುಮಾರ ಶ್ರೀಗಳು ಜನ ಸಾಮಾನ್ಯರು ಆಚರಿಸುತ್ತಿದ್ದ ಹಬ್ಬಗಳನ್ನು ಶರಣರ ಜಯಂತಿಗಳೊಂದಿಗೆ ಸಮ್ಮಿಲಿತಗೊಳಿಸಿ ಆಚರಣೆಗೆ ತಂದರು. ಅವರು ಯಾವುದೇ ಕಾರ್ಯಕ್ರಮಕ್ಕೂ ಮುನ್ನ ಶಿವ ಧ್ವಜಾರೋಹಣ ನೆರವೇರಿಸುತ್ತಿದ್ದರು. ಅವರೇ ಶಿವ ಧ್ವಜಾರೋಹಣದ ಶರಣರ ಪರಂಪರೆಯನ್ನು ಮೊದಲು ಜಾರಿಗೆ ತಂದವರು ಎಂದರು.

ಅಧ್ಯಾಪಕ ಸಂತೋಷ್, ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಬಿಸಿಲು-ಬೆಳದಿಂಗಳು ಅಂಕಣದ 'ಯಾಂತ್ರಿಕ ಶಿವರಾತ್ರಿ ಜಾಗರಣೆ ನಿದ್ದೆಗೇಡು!' ಲೇಖನ ವಾಚಿಸಿದರೆ ದ್ಯಾಮೇಶ್, ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ಅರಿವು-ಮರೆವು ಅಂಕಣದ 'ನಿತ್ಯ ಶಿವಯೋಗವೇ ಶಿವರಾತ್ರಿ' ಲೇಖನ ವಾಚಿಸಿದರು.

ಸಂಗೀತ ಶಿಕ್ಷಕ ಹೆಚ್.ಎಸ್. ನಾಗರಾಜ್, ವಿದ್ಯಾರ್ಥಿಗಳಾದ ಸ್ನೇಹ, ಸುಪ್ರಭೆ, ಮುಕ್ತಾ ವಚನ ಗೀತೆಗಳನ್ನು ಹೇಳಿಕೊಟ್ಟರು. ದೈಹಿಕ ಶಿಕ್ಷಕ ಸಿದ್ದೇಶ್ ಶಿವ ಧ್ವಜಾರೋಹಣದ ಕಾರ್ಯ ನಡೆಸಿಕೊಟ್ಟರೆ, ಜಯಪ್ಪ ನಿರೂಪಿಸಿದರು.

# ಶಿವರಾತ್ರಿ ನಿಮಿತ್ತ ಗಂಗಾಜಲ ವಿತರಣೆ



**ಹರಪನಹಳ್ಳಿ ಪಟ್ಟಣದ ಶಿವಾಲಯಗಳಲ್ಲಿ ಸಂಭ್ರಮದ ಶಿವರಾತ್ರಿ**

ಹರಪನಹಳ್ಳಿ, ಮಾ.11- ಮಹಾಶಿವರಾತ್ರಿ ಅಂಗವಾಗಿ ಮಾಜಿ ಸಚಿವ ಮಾಲೂರು ಕೃಷ್ಣಯ್ಯಶೆಟ್ಟಿ ಕಳಿಸಿಕೊಟ್ಟಿದ್ದ ಪವಿತ್ರ ಗಂಗಾ ಜಲವನ್ನು ತಾಲ್ಲೂಕಿನ ಎಲ್ಲಾ ಶಿವ ದೇವಾಲಯಗಳಿಗೂ ಹಾಗೂ ಮುಜರಾಯಿ ಇಲಾಖೆಯ ದೇವಾಲಯಗಳಿಗೆ ಶಿವರಾತ್ರಿ ಹಿಂದಿನ ದಿನ ತಹಶೀಲ್ದಾರ್ ಎಲ್.ಎಂ. ನಂದೀಶ್ ವಿತರಿಸಿದರು.

10 ಲೀಟರ್‌ನ ಮೂರು ಕ್ಯಾನುಗಳಲ್ಲಿ ಗಂಗಾಜಲವನ್ನು ಕಳುಹಿಸಲಾಗಿದ್ದು, ನಾಲ್ಕು ಹೋಬಳಿಗೂ ಗಂಗಾ ಜಲವನ್ನು ವಿತರಿಸಲಾಯಿತು. ಧಾರ್ಮಿಕ ದತ್ತಿ ಇಲಾಖೆಯ ಉಚ್ಚಂಗಿದುರ್ಗದ ರಮೇಶ್ ಇದ್ದರು. ದೇವಸ್ಥಾನಗಳ ಅರ್ಚಕರು ಭಕ್ತರಿಗೆ ತೀರ್ಥ ರೂಪದಲ್ಲಿ ವಿತರಿಸಿದರು.

ತಾಲ್ಲೂಕಿನಲ್ಲಿ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮಹಾ ಶಿವರಾತ್ರಿಯನ್ನು ಜನರು ಆಚರಿಸಿದ್ದು, ಪಟ್ಟಣದ ಗೋಕರ್ಣೇಶ್ವರ ದೇವಾಲಯ, ವಾಲ್ಮೀಕಿ ನಗರದ ಗೋಣಿ ಬಸವೇಶ್ವರ ದೇವಾಲಯ, ನಗರೇ ಶ್ವರ, ಎಸ್‌ಬಿಎಂ ಬಳಿ ಇರುವ, ಗಣೇಶ ದೇವಸ್ಥಾನದ ಶಿವ ದೇವಾ ಲಯ, ಬೆಸ್ಕಾಂ ಕಛೇರಿ ಬಳಿ ಹೀಗೆ ವಿವಿಧೆಡೆ ಶಿವ ದೇವಾಲಯಗಳಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು. ಅನೇಕರು ಉಪವಾಸವಿದ್ದು, ಶಿವನಿಗೆ ಭಕ್ತಿ ಸಮರ್ಪಿಸಿದರು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಬಾಗಳಿಯ ಐತಿಹಾಸಿಕ ಕಲ್ಲೇಶ್ವರ ದೇವಾಲಯದಲ್ಲಿ ಬೇರೆ ಬೇರೆ ಗ್ರಾಮಗಳ ಭಕ್ತರು ಆಗಮಿಸಿ, ಅಭಿಷೇಕ ಮಾಡಿಸಿ, ವಿಶೇಷ ಪೂಜೆ ಸಲ್ಲಿಸಿದರು.

ಕೂಲಹಳ್ಳಿಯ ಗೋಣಿಬಸವೇಶ್ವರ, ನೀಲಗುಂದ ಭೀಮೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿತು. ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹಣ್ಣು ಸೇರಿದಂತೆ ವಿವಿಧ ಬಗೆಯ ಹಣ್ಣುಗಳಿಗೆ ಭಾರೀ ಬೇಡಿಕೆ ಉಂಟಾಗಿತ್ತು. ಹೂವು, ಕಾಯಿ ವ್ಯಾಪಾರ ಜೋರಾಗಿತ್ತು.

# ಸಂಕಲ್ಪ ಸಿದ್ಧಿ ವಿನಾಯಕ, ಅಭಯ ಹಸ್ತ ಆಂಜನೇಯ ದೇವಸ್ಥಾನದಲ್ಲಿ ಮಹಾಶಿವರಾತ್ರಿ ವಿಶೇಷ ಪೂಜೆ





ದಾವಣಗೆರೆ, ಮಾ.11- ಮಹಾಶಿವರಾತ್ರಿ ಪ್ರಯುಕ್ತ ನಗರದಲ್ಲಿಂದು ಶಿವನ ದೇವಸ್ಥಾನಗಳಲ್ಲಷ್ಟೇ ಅಲ್ಲದೇ, ನಗರದ ಕೆಲ ದೇವಸ್ಥಾನಗಳಲ್ಲೂ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು.

ಡಿಸಿಎಂ ಟೌನ್ ಶಿಪ್ ಸಮೀಪದ ಶಕ್ತಿನಗರದ ಬಳಿಯ ರಾಜೇಂದ್ರ ಬಡಾವಣೆಯಲ್ಲಿ ಶ್ರೀ ಸಂಕಲ್ಪ ಸಿದ್ಧಿ ವಿನಾಯಕ, ಶ್ರೀ ಅಭಯ ಹಸ್ತ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶಿವನ ಆರಾಧನೆ ಸಹಿತ ವಿಶೇಷ ಪೂಜೆ ನಡೆಯಿತು.

# ಹಳೇಕುಂದುವಾಡ : 9 ದಿನ ಶಿವರಾತ್ರಿ ವಿಶೇಷ ಪೂಜೆ



ದಾವಣಗೆರೆ, ಮಾ. 11- ಹಳೇಕುಂದುವಾಡ ಗ್ರಾಮದಲ್ಲಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ 9 ದಿನಗಳ ವಿಶೇಷ ಪೂಜಾ ಕಾರ್ಯಕ್ರಮಗಳು ಗುರುವಾರದಿಂದ ಆರಂಭಗೊಂಡಿವೆ. ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದ ಧರ್ಮಾಧಿಕಾರಿ ಜೆ. ರಾಜಣ್ಣ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಧ್ವಜಾರೋಹಣ ನೆರವೇರಿತು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವೀಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಡಾ. ಹೆಚ್. ವಿಶ್ವನಾಥ್, ಮಾಜಿ ಮೇಯರ್ ಗುರುನಾಥ್, ಕೆಂಪನಿಂಗಪ್ಪರ್ ಮಂಜಪ್ಪ, ಎರೇಹಳ್ಳಿ ಕರಿಬಸಪ್ಪ, ಗೌಡ್ರು ಬಸವರಾಜಪ್ಪ, ಕೆ. ಸಿದ್ದಪ್ಪ, ಎಂ. ವೆಂಕಟೇಶಪ್ಪ, ಸಂಗನಗೌಡ್ರು ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ : ಬ್ರಹ್ಮಾಕುಮಾರಿ ವಿವಿಯಿಂದ ಜ್ಯೋತಿರ್ಲಿಂಗ ದರ್ಶನ



ಹರಿಹರ, ಮಾ.11- ನಗರದ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಶಿವರಾತ್ರಿ ಕಾರ್ಯಕ್ರಮ ಶಿವಧ್ವಜಾರೋಹಣ, ದೀಪಾರಾಧನೆ, ಶಿವ ನಾಮಸ್ಮರಣೆ, ಶಿವ ಧ್ಯಾನ, ಯೋಗ, ತಪಸ್ಸು, ಅಧ್ಯಾತ್ಮಿಕ ಚಿಂತನೆ ಮತ್ತು ಜೋತಿರ್ಲಿಂಗ ದರ್ಶನ ಸಮಾರಂಭವನ್ನು ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬಿ.ಕೆ.ಶಿವದೇವಿ ಅಕ್ಕನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬಿ.ಕೆ.ಅನಸೂಯಾ ಅಕ್ಕ, ತುಂಗಭದ್ರಾ ಬ್ಯಾಂಕ್ ಅಧ್ಯಕ್ಷ ಶಿವಾನಂದಪ್ಪ ಎಂ.ಹಲಸಬಾಳು, ನಾರೇಯಣ ಬ್ಯಾಂಕ್ ಉಪಾಧ್ಯಕ್ಷ ಶ್ರೀಮೂರ್ತಿ, ಕೊಂಡಜ್ಜಿ ನಾಗಪ್ಪ, ಉಪನ್ಯಾಸಕರಾದ ಶ್ರೀಮತಿ ಶೈಲಾ ರವೀಂದ್ರ, ಶಿವಪ್ರಸಾದ್ ಹಾಗೂ ಸಂಸ್ಥೆಯ ಸರ್ವ ಸಾಧಕರು ಭಾಗವಹಿಸಿದ್ದರು.

# ಗುಡೇಕೋಟೆಯಲ್ಲಿ ವಿಶೇಷ ಪೂಜೆ



ಕೂಡ್ಲಿಗಿ, ಮಾ.11- ತಾಲ್ಲೂಕಿನ ಗುಡೇಕೋಟೆ ಗ್ರಾಮದಲ್ಲಿ ಶಿವನು ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿರುವ ಅಪರೂಪದ ಶಿವನ ದೇವಾಲಯವಿದ್ದು, ಪ್ರತಿವರ್ಷ ಶಿವರಾತ್ರಿಯಂದು ಈ ದೇವರ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಭಕ್ತರು ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ. ಶಿವರಾತ್ರಿಯಾದ ಇಂದು ಬೆಳಿಗ್ಗೆಯಿಂದ ಭಕ್ತರು ದೇವಾಲಯಕ್ಕೆ ಹಣ್ಣು, ಕಾಯಿ, ಪ್ರಸಾದ ಅರ್ಪಿಸಿ ಪೂಜೆ ಸಲ್ಲಿಸಿದರು.

**ದೇವಾಲಯದ ವಿಶೇಷ:** ಅಂದಾಜು 5 ಅಡಿ ಎತ್ತರದ ಶಿವಪಾರ್ವತಿ ಮೂರ್ತಿಯನ್ನು ಬಳಪದ ಕಲ್ಲಿನಿಂದ ಕೆತ್ತಲಾಗಿದ್ದು, ಮೂರ್ತಿಯನ್ನು ಹಾಗೂ ದೇವಾಲಯವನ್ನು ವಿಜಯನಗರ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ಇತಿಹಾಸಕಾರರು ಹೇಳುತ್ತಿದ್ದು, ಕೆಲವರು ಪಾಳೇಗಾರರ ಕಾಲದ್ದಾಗಿದೆ ಎಂತಲೂ ಹೇಳುತ್ತಾರೆ. ಶಿವ ತನ್ನ ತೊಡೆಯ ಮೇಲೆ ಪಾರ್ವತಿಯನ್ನು ಕೂರಿಸಿಕೊಂಡಿರುವ ಬಳಪದ ಕಲ್ಲಿನ ಮೂರ್ತಿಯ ಜೊತೆಗೆ ಪಕ್ಕದಲ್ಲಿಯೇ ಮಹಿಷಾಸುರ ಮರ್ದಿನಿ ಮೂರ್ತಿಯನ್ನು ಸಹ ಅಷ್ಟೇ ಸೊಗಸಾಗಿ ಕೆತ್ತಲಾಗಿದೆ.

**ಶಿವರಾತ್ರಿಯಂದು ಭಕ್ತಸಾಗರ:** ಗುಡೇಕೋಟೆಯ ಶಿವನ ದೇವಾಲಯಕ್ಕೆ ಭಕ್ತರು ಹರಿದು ಬಂದರು. ದೂರದ ಊರುಗಳಿಂದಲೂ ಸಹ ಭಕ್ತರು ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ಧನ್ಯತಾ ಭಾವ ಮೆರೆದರು. ರಾತ್ರಿಯಿಡೀ ತಾಲ್ಲೂಕಿನ ಶಿವನ ದೇವಾಲಯಗಳಲ್ಲಿ ಭಕ್ತರು ಜಾಗರಣೆ ಮಾಡುವುದರ ಮೂಲಕ ಹಬ್ಬಕ್ಕೆ ಕಳೆ ತುಂಬಿದರು.


# ಮಲೇಬೆನ್ನೂರು : ವಿನಾಯಕ ನಗರ ಕ್ಯಾಂಪ್‌ನಲ್ಲಿ ಅನ್ನ ಸಂತರ್ಪಣೆ





ಮಲೇಬೆನ್ನೂರು, ಮಾ.11- ವಿನಾಯಕ ನಗರ ಕ್ಯಾಂಪಿನಲ್ಲಿರುವ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಅಭಿಷೇಕ ಹಾಗೂ ವಿಶೇಷ ಪೂಜೆ ನಡೆದವು. ಹಬ್ಬದ ಪ್ರಯುಕ್ತ ಅನ್ನ ಸಂತರ್ಪಣೆ ಏರ್ಪಡಿಸಲಾಗಿದ್ದು ಕುಂಬಳೂರು, ವಿನಾಯಕ ನಗರ ಕ್ಯಾಂಪ್, ಜಿಗಳಿ, ನಂದಿತಾವರೆ, ಭಾನುವಳ್ಳಿ ಗ್ರಾಮಗಳ ಭಕ್ತರು ಭಾಗವಹಿಸಿದ್ದರು. ಭದ್ರಾಮಣ್ಣನವರ ಪುತ್ರಿ ಅನುಷಾ ಚಂದ್ರಶೇಖರ್ ದಾಸೋಹ ದಾನಿಗಳಾಗಿದ್ದರು.

ಕುಂಬಳೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ. ಪರಶುರಾಮಪ್ಪ, ಹನುಮಂತಪ್ಪ, ಕ್ಯಾಂಪಿನ ಸಿ.ಹೆಚ್. ಪ್ರಸಾದ್, ಎಂ. ನಾಗೇಶ್ವರ ರಾವ್, ಕೊತ್ತಕಲಿ ಶ್ರೀನಿವಾಸ್, ಗ್ರಾ.ಪಂ. ಸದಸ್ಯ ಬಿ. ಶ್ರೀನಿವಾಸ್, ಮಾಜಿ ಸದಸ್ಯ ಎನ್. ಪ್ರಸಾದ್ ರಾವ್, ಮಕ್ಕಳ ತಜ್ಞ ಡಾ. ಶ್ರೀನಿವಾಸ್, ಎಂ. ನಾನಿ, ಕುಂಬಳೂರು ಗ್ರಾ.ಪಂ. ಉಪಾಧ್ಯಕ್ಷ ಹನುಮಂತಪ್ಪ, ಜಿಗಳಿಯ ಜಿ. ಆನಂದಪ್ಪ, ಕೆ.ಎಸ್. ನಂದ್ಯೆಪ್ಪ ಇನ್ನಿತರರು ಭಾಗವಹಿಸಿದ್ದರು.



ಮಲೇಬೆನ್ನೂರು ಸಮೀಪದ ಹಿಂಡಸಘಟ್ಟ ಗ್ರಾಮದಲ್ಲಿ ಈಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ನೂತನವಾಗಿ ಶಿವಲಿಂಗಕ್ಕೆ ಬೆಳ್ಳಿ ಕವಚವನ್ನು ಧರಿಸಲಾಯಿತು. ವಿಶೇಷ ಪೂಜೆ, ಮಂತ್ರ ಪಂಚಾಮೃತ ಅಭಿಷೇಕ ಹಾಗೂ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.



ಹಳೇಬೇತೂರು ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ವಿಶೇಷ ಪೂಜೆ, ಅಲಂಕಾರವನ್ನು ಮಾಡಲಾಗಿತ್ತು.

# ನಂದಿತಾವರೆಯಲ್ಲಿ 16ರಂದು ಶ್ರೀ ಬಸವೇಶ್ವರ ರಥೋತ್ಸವ

ಮಲೇಬೆನ್ನೂರು, ಮಾ.11- ನಂದಿತಾವರೆ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವವು ಮಾ.16 ರ ಮಂಗಳವಾರ ತಡರಾತ್ರಿ ಜರುಗಲಿದೆ.

ರಥೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 13ರ ಶನಿವಾರ ಬೆಳಿಗ್ಗೆ ನಂದಿ ಧ್ವಜಾರೋಹಣ, ರಾತ್ರಿ ಬಸವೇಶ್ವರ ದೇವರಿಗೆ ಕಂಕಣಧಾರಣೆ, ಮಾ.14 ರ ಭಾನುವಾರ ಬೆಳಿಗ್ಗೆ ಕುದುರೆ ಉಚ್ಛಾಯ, ಮಾ.15 ರ ಸೋಮವಾರ ಬೆಳಿಗ್ಗೆ ಗಜೋತ್ಸವ, ರಾತ್ರಿ ಮಹಾರಥಕ್ಕೆ ಕಳಾಸರೋಹಣ ನೆರವೇರಲಿದೆ.

ಮಾ. 16 ರ ಮಂಗಳವಾರ ಬೆಳಿಗ್ಗೆ ದೇವರಿಗೆ ರುದ್ರಾಭಿಷೇಕ, ನಂತರ ಜಿಗಳಿ ಗ್ರಾಮದ ಗೌಡ್ರು ವಂಶಸ್ಥರಿಂದ ದೇವರಿಗೆ ಬಾಸಿಂಗ ಧಾರಣೆ ನಡೆಯಲಿದೆ. ಬೆಳಿಗ್ಗೆ 10.30 ರಿಂದ ಕಿವಿ ಚುಚ್ಚುವುದು, ಶಸ್ತ್ರ ಹಾಕುವುದು ಸೇರಿದಂತೆ ಹರಕೆ ಕಾರ್ಯಕ್ರಮಗಳು ನಡೆಯಲಿದ್ದು, ಇದೇ ದಿನ ತಡರಾತ್ರಿ ಎಕ್ಕೆಗೊಂದಿ ಬಸವೇಶ್ವರ ದೇವರೊಂದಿಗೆ ನಂದಿತಾವರೆ ಬಸವಣ್ಣನ ತೇರು ಜರುಗಲಿದೆ.

# ಶೋಷಿತ ಮಹಿಳೆಯರು ಹಿಂಜರಿಯದೆ ಹೋರಾಟ ನಡೆಸಿ : ಮಹಾಪೌರ ವೀರೇಶ್



ದಾವಣಗೆರೆ, ಮಾ.11- ಮಹಿಳೆಯರು ಶೋಷಣೆಗೊಳಗಾದಾಗ, ಹಿಂಜರಿಯದೇ ಕಾನೂನಾತ್ಮಕವಾಗಿ ಹೋರಾಟ ಮಾಡಬೇಕು ಎಂದು ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಹೇಳಿದರು.

ಪಾಲಿಕೆ ಆವರಣದ ಸಭಾಂಗಣದಲ್ಲಿ ಮಹಾನಗರ ಪಾಲಿಕೆ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರ ಮೇಲೆ ದೌರ್ಜನ್ಯ, ಅಪಚಾರಗಳು ನಡೆದಾಗ ದೇಶದಲ್ಲಿ ಸಾಕಷ್ಟು ಪ್ರಬಲ ಕಾನೂನುಗಳಿವೆ. ಅನ್ಯಾಯಕ್ಕೊಳಗಾದ ಮಹಿಳೆಯರು ಹಿಂಜರಿಯದೇ ಪ್ರತಿಭಟಿಸಬೇಕು ಎಂದರು. ಪಾಲಿಕೆ ಮಹಿಳಾ ನೌಕರರ ಸಲಹೆಯಂತೆ ಒಂದು ಸಮಿತಿ ರಚಿಸಿ, ಅವರ ಕುಂದು-ಕೊರತೆಗೆ ಅವಕಾಶ ನೀಡಲಾಗುವುದು. ನೌಕರರು-ಜನಪ್ರತಿನಿಧಿಗಳು ಎರಡು ಚಕ್ರಗಳಿದ್ದಂತೆ. ಸಮಾನಾಂತರವಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಆದ್ದರಿಂದ ನಿಮಗೆ ನಾವು ಸದಾ ಸಹಕಾರ ನೀಡುತ್ತೇವೆ ಎಂದರು.

ಉಪ ಆಯುಕ್ತೆ ನಳಿನ ಮಾತನಾಡಿ, ಪ್ರತಿಯೊಂದು ಕ್ಷೇತ್ರಗಳಲ್ಲೂ ಮಹಿಳೆ ತನ್ನ ಛಾಪನ್ನು ಮೂಡಿಸಿ ಸರಿಸಮಾನವಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಅಂಥವರಿಗೆ ಭದ್ರತೆ ಮತ್ತು ಪ್ರೋತ್ಸಾಹದ ಕೊರತೆ ಇದೆ. ಅದನ್ನು ನೀಗಿಸಬೇಕಾಗಿದೆ ಎಂದರು.

ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಮಾತನಾಡಿ ಸಹನೆ, ತಾಳ್ಮೆಗೆ ಮತ್ತೊಂದು ಹೆಸರು ತಾಯಿ. ಮಹಿಳೆಗೆ ಎಷ್ಟೇ ಕಷ್ಟಗಳಿದ್ದರೂ ತನ್ನ ಒಡಲಲ್ಲಿ ಇಟ್ಟುಕೊಂಡು ನಮ್ಮ ಏಳ್ಗೆಗೆ, ನಮ್ಮ ಸಹಕಾರಕ್ಕೆ ಬರುತ್ತಾರೆ. ಅದೇ ರೀತಿ ನಾವು ಕೂಡ ಹೆಣ್ಣನ್ನು ಪೂಜಿಸಿ ಪೋಷಿಸಬೇಕು. ಅವರ ಕಷ್ಟ-ಸುಖಗಳಲ್ಲಿ ನಾವು ಭಾಗಿಯಾಗಿ ಅವರ ಋಣ ತೀರಿಸಬೇಕೆಂದರು.

ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ಈ ಬಾರಿ ಬಜೆಟ್‌ನಲ್ಲಿ 37 ಸಾವಿರ ಕೋಟಿ ರೂಪಾಯಿಯನ್ನು ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಮುಖ್ಯಮಂತ್ರಿ ಮೀಸಲಿಟ್ಟಿದ್ದಾರೆ. ನೌಕರರುಗಳಾದ ನಾಗರಾಜ್, ಚಂದ್ರಪ್ಪ, ನಾಗರತ್ನಮ್ಮ ಮಾತನಾಡಿ, ಹೆಣ್ಣು ಶೋಷಣೆ ಸ್ಥಾನದಲ್ಲಿ ನಿಲ್ಲುತ್ತಿದ್ದಾಳೆ. ಆ ರೀತಿ ಆಗದಂತೆ ಅವರಿಗೆ ಗೌರವ ನೀಡಿ, ಪೋಷಣೆ ಮಾಡುವ ಅವಶ್ಯಕತೆ ಇದೆ ಎಂದರು.

ಸಮಾರಂಭದಲ್ಲಿ ನೀಲಗಿರಿಯಪ್ಪ, ಮಂಜುನಾಥ, ನರೇಂದ್ರಕುಮಾರ್, ಮಂಜಾನಾಯ್ಕ, ಪ್ರಭು ಇನ್ನಿತರರಿದ್ದರು. ನಳಿನ, ನಾಗರತ್ನಮ್ಮ ಮಲ್ಲಿಕಾರ್ಜುನ್, ಗೌರಮ್ಮ, ಸುನಂದ ಅವರನ್ನು ಸನ್ಮಾನಿಸಲಾಯಿತು.

# ಶ್ರೀ ಸರ್ವಜ್ಞ ಸಂಶೋಧನಾ ಪೀಠ ಉದ್ಘಾಟನೆ

ದಾವಣಗೆರೆ, ಮಾ.11- ಶ್ರೀ ಸರ್ವಜ್ಞ ಸಂಶೋಧನಾ ಪೀಠದ ಉದ್ಘಾಟನಾ ಕಾರ್ಯಕ್ರಮ ಸಂಶೋಧನಾ ಪೀಠದ ಕಚೇರಿಯಲ್ಲಿ ನಡೆಯಿತು.

ಜಾನಪದ ವಿದ್ವಾಂಸ ಡಾ.ಮಲ್ಲಿಕಾರ್ಜುನ ಕಲಮರಹಳ್ಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆಯನ್ನು ಸಾಹಿತಿ ಬಸವರಾಜ ಕುಂಚೂರ್ ವಹಿಸಿದ್ದರು. ಸರ್ವಜ್ಞ ಸಂಶೋಧನಾ ಪೀಠದ ಸಂಸ್ಥಾಪಕ ಅಧ್ಯಕ್ಷ ಡಾ. ಬುರುಡೇಕಟ್ಟಿ ಮಂಜಪ್ಪ, ಜಾನಪದ ಕಲಾವಿದರು, ಗೋಟಗೋಡಿ ಮೂರ್ತಿ ಕಲಾವಿದ ಬಸವರಾಜ್ ಚ. ಕುಂಬಾರ್, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ರಾಜಶೇಖರ್ ಗುಂಡಗಟ್ಟಿ, ಲಲಿತಕಲಾ ಕಾಲೇಜು ಪ್ರಾಧ್ಯಾಪಕ ಹರೀಶ್, ಸದಾಶಿವಣ್ಣ, ಸಂಶೋಧಕ ಕೆ.ಎಂ. ರಾಘವೇಂದ್ರಚಾರ್, ರಾಣೇಬೆನ್ನೂರು ನಾಗರಾಜ್ ಬಿ ಚಕ್ರಸಾಲಿ, ರಾಜಸ್ಥಾನ ಜೈಪುರದ ಅನಿಲ್, ಮೋಹನ್, ಉಪನ್ಯಾಸಕ ಕರಿಬಸಪ್ಪ ಇನ್ನಿತರರಿದ್ದರು. ಪ್ರಾಚೀನ ತಾಳೆಗರಿ, ತಾಮ್ರಪತ್ರ, ಪ್ರಾಚೀನ ಹಸ್ತಪ್ರತಿಗಳ ಭಂಡಾರ ಉದ್ಘಾಟನೆ ಮಾಡಲಾಯಿತು.

# ಮಹಿಳೆಯರಿಗೆ ಶಾಂತಿ, ಧೈರ್ಯ, ಛಲ ಪ್ರಕೃತಿಯ ಕೊಡುಗೆ



**ಹರಪನಹಳ್ಳಿಯಲ್ಲಿ ನ್ಯಾ. ಉಂಡಿ ಮಂಜುಳಾ ಶಿವಪ್ಪ**

ಹರಪನಹಳ್ಳಿ, ಮಾ.11- ಶಾಂತಿ, ಧೈರ್ಯ, ಛಲ ಇವುಗಳು ಮಹಿಳೆಯರಿಗೆ ಪ್ರಕೃತಿಯ ಕೊಡುಗೆಯಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ತಾಲ್ಲೂಕಿನ ನೀಲಗುಂದ ಗ್ರಾಮದ ಶ್ರೀಮಠದ ಶ್ರೀ ಚನ್ನಬಸವ ಶಿಕ್ಷಣ ಸಂಸ್ಥೆ, ಬಸವಾದಿ ಶರಣರ ಸ್ಮಾರಕ, ಶಾಲಾ-ಕಾಲೇಜುಗಳ ವಾರ್ಷಿಕೋತ್ಸವ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶತಮಾನಗಳಿಂದಲೂ ದೌರ್ಜನ್ಯ, ದಬ್ಬಾಳಿಕೆಗೆ ಒಳಗಾಗಿ ಮೌನದಿಂದಲೇ ತಮ್ಮ ಮೇಲೆ ನಡೆಯುತ್ತಿರುವ ಅನ್ಯಾಯಗಳಿಗೆ ಗೆಲುವನ್ನು ಮರೆಯಲ್ಲೇ ಸಾಧಿಸುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ತಮ್ಮ ರಕ್ಷಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ವರದಕ್ಷಿಣೆ ವಿಚಾರವಾಗಿ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಕೇಳಿ ಬರುತ್ತಿದ್ದು, ಮಹಿಳೆಯ ಯಾವುದೇ ವಿಚಾರದಲ್ಲೂ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಬಾರದು ಎಂದರು.

ನೀಲಗುಂದ ಗುಡ್ಡದ ವಿರಕ್ತ ಮಠದ ಪೀಠಾಧಿಪತಿ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಮಾತನಾಡಿ ಹೆಣ್ಣು ಸಂಸಾರದ ಕಣ್ಣು ಎನ್ನುವುದಕ್ಕಿಂತ ಹೆಣ್ಣು ಜಗದ ಕಣ್ಣು. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತು ಹೋಗಬೇಕು. ಭ್ರಷ್ಟಾಚಾರ ನಿರ್ಮೂಲನೆ ಹೆಣ್ಣು ಮಕ್ಕಳಿಂದಲೇ ಸಾಧ್ಯ ಎಂದು ಹೇಳಿದರು.

ಅಪರ ಸರ್ಕಾರಿ ವಕೀಲ ಕಣಿವಿಹಳ್ಳಿ ಮಂಜುನಾಥ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಕೀಲರುಗಳಾದ ವಿ.ಜಿ. ಪ್ರಕಾಶ್ ಗೌಡ, ಎಂ. ಮೃತ್ಯುಂಜಯ, ಬೇಲೂರು ಸಿದ್ದೇಶ್, ವಾಗೇಶ್, ಹೊಸಮನಿ ಮಂಜು ನಾಥ್, ಗುಡದಯ್ಯ, ಬೇಲೂರು ಸಿದ್ದೇಶ್ ಮುಖಂಡರಾದ ಗುಂಡಗತ್ತಿ ಕೊಟ್ರಪ್ಪ, ಮೈಲಪ್ಪ, ಜಿ. ರೇಣುಕ, ಬಸವರಾಜ್, ಕೊಟ್ರೇಶ್ ಹಾಗೂ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

# ಹಡಗಲಿ : ಮೈಲಾರದಲ್ಲಿ ಮಹಿಳಾ ಸ್ನೇಹಿ ಗ್ರಾಮಸಭೆ




ಹೂವಿನಹಡಗಲಿ, ಮಾ.11- ತಾಲ್ಲೂಕಿನ ಮೈಲಾರ ಗ್ರಾಮದ ಸಮುದಾಯ ಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಗ್ರಾಮ ಪಂಚಾಯ್ತಿ ಮತ್ತು ಸಂಜೀವಿನಿ ಮಹಿಳಾ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಮಹಿಳಾ ಸ್ನೇಹಿ ಗ್ರಾಮ ಸಭೆಯನ್ನು ಆಯೋಜಿಸಲಾಗಿತ್ತು.

ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ವೀರಮ್ಮ ಮಾತನಾಡಿ, ಮಹಿಳೆ ಸಂಸಾರವನ್ನು ಮುನ್ನಡೆಸಿಕೊಂಡು ಹೋಗುತ್ತಾಳೆಯೇ ವಿನಃ ಪಲಾಯನ ಮಾಡುವುದಿಲ್ಲ. ತನ್ನ ಕುಟುಂಬದ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಾಳೆ ಎಂದು ತಿಳಿಸಿದರು.

ಗ್ರಾ.ಪಂ. ಉಪಾಧ್ಯಕ್ಷೆ ಕೆ. ಸರಸ್ವತಿ ಕಾರ್ಯಕ್ರಮ ಉದ್ಘಾಟಿಸಿದರು. ವಾಣಿಶ್ರೀ ಒಡೆಯರ್, ಅಂಗನವಾಡಿ ಕಾರ್ಯಕರ್ತೆ ಜಾನಮ್ಮ ಮಾತನಾಡಿದರು. ಮಾಗಳದ ಯಶಸ್ವಿ ಉದ್ಯಮಿ ಲಕ್ಷ್ಮೀ ಮಲ್ಲಾರೆಡ್ಡಿ ಅವರನ್ನು ಸತ್ಕರಿಸಲಾಯಿತು.

ಸದಸ್ಯರಾದ ಜಿ. ರೇಖಾ, ಎಚ್. ಪಾರ್ವತಿ, ನೀಲಮ್ಮ, ಗೌರಮ್ಮ ಒಡೆಯರ್, ಒಕ್ಕೂಟದ ವನಜಾಕ್ಷಮ್ಮ, ಕಾರ್ಯದರ್ಶಿ ಎನ್. ಮಂಜುಳ, ಎನ್. ಲಕ್ಷ್ಮಿಬಾಯಿ, ಗಾಜಿ ರತ್ನಮ್ಮ ಸೇರಿದಂತೆ, ವಿವಿಧ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಭಾಗವಹಿಸಿದ್ದರು ಎಂದು ಪಿಡಿಒ ಹೆಚ್. ನಿಂಗಪ್ಪ ತಿಳಿಸಿದ್ದಾರೆ.

## ಇಂದು ಶಿವರಾತ್ರಿ ಕಾರ್ಯಕ್ರಮ

ನಗರದ ಜಯನಗರ ಬೀರೇಶ್ವರ ಬಡಾವಣೆ, ಸರಸ್ವತಿ ನಗರದ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ 7ನೇ ವರ್ಷದ ಮಹಾಶಿವರಾತ್ರಿ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಇಂದು ಡಾ|| ರಂಗನಾಥ್ ಎಸ್. ಅವರಿಂದ ಪ್ರಸಾದ ವಿನಿಯೋಗ ಹಾಗೂ ಬನ್ನಿ ಮಹಾಂಕಾಳಿ ದೇವಿಯ ಮಹೋತ್ಸವ ನಡೆಯಲಿದೆ. ಸದ್ಭಕ್ತರು ಧಾರ್ಮಿಕ ಕಾರ್ಯಕ್ರಮಕ್ಕೆ ಆಗಮಿಸಿ, ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಬನ್ನಿ ಮಹಾಂಕಾಳಿ ದೇವಸ್ಥಾನ ಸಮಿತಿಯವರು ಮನವಿ ಮಾಡಿದ್ದಾರೆ.

## ಕೆ.ಎನ್.ಹಳ್ಳಿ: ದೇವಸ್ಥಾನ ಉದ್ಘಾಟನೆ



ಮಲೇಬೆನ್ನೂರು, ಮಾ.11- ಕಡರನಾಯ್ಕನಹಳ್ಳಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದ ಉದ್ಘಾಟನೆ ಹಾಗೂ ಸ್ವಾಮಿಯ ಪುನರ್ ಪ್ರತಿಷ್ಠಾಪನೆ ಹಾಗೂ ನೂತನ ಕವಚಧಾರಣೆ ಕಾರ್ಯಕ್ರಮ ಸೋಮವಾರ ಜರುಗಿತು.

ಈ ಸಂಬಂಧ ಅಭಿಷೇಕ, ಪೂಜೆ, ಹವನ ಕಾರ್ಯಕ್ರಮಗಳಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್ ಮತ್ತು ಗ್ರಾ.ಪಂ. ಅಧ್ಯಕ್ಷ ಭರಮಗೌಡ, ಉಪಾಧ್ಯಕ್ಷೆ ಗಿರಿಜಮ್ಮ, ಗ್ರಾ.ಪಂ. ಮಾಜಿ ಅಧ್ಯಕ್ಷರು, ಹಾಲಿ ಸದಸ್ಯ ವಿ. ಕುಬೇರಪ್ಪ ಇನ್ನಿತರರು ಪಾಲ್ಗೊಂಡಿದ್ದರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

# ವಿದ್ಯಾರ್ಥಿ ವೇತನ ಬಿಡುಗಡೆಗೆ ಒತ್ತಾಯ




ಹೊನ್ನಾಳಿ, ಮಾ.11- ಚಹ ಕುಡಿದರೆ ನಿದ್ದೆ ಬರುವುದಿಲ್ಲ ಎಂಬ ಹಿರಿಯರ ಮಾತಿನಂತೆ, ಚಹ ಮಾರಿದ ವ್ಯಕ್ತಿ ಪ್ರಧಾನ ಮಂತ್ರಿಯಾಗಿ ದೇಶದ ಜನರು ನಿದ್ದೆ ಮಾಡದ ಸ್ಥಿತಿ ನಿರ್ಮಾಣ ಮಾಡಿರುವುದು ಸ್ಪಷ್ಟವಾಗುತ್ತಿದೆ ಎಂಬುದಾಗಿ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಹೇಳಿದರು.

ತಾಲ್ಲೂಕು ದಲಿತ ಸಂಘರ್ಷ ಸಮಿತಿ ಬಗರ್‌ಹುಕ್ಕುಂ ಸಾಗುವಳಿ ಚೀಟಿ ನೀಡಬೇಕು, ವಿದ್ಯಾರ್ಥಿ ವೇತನ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿದ ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಮಾತನಾಡಿದರು.

ದೇಶದ ಯಾವುದೇ ರೈತರಿಗೆ ಬೇಡವಾದ ಕಾಯ್ದೆಗಳು ನಮ್ಮ ಪ್ರಧಾನಿ ಮೋದಿಗೆ ಬೇಕು. ಸಾಮಾನ್ಯ ಜನತೆಗೆ ಬೇಡವಾದ ಇವಿಎಂ ಮಾತದಾನವು ಇವರಿಗೆ ಬೇಕು.

ಪ್ರಧಾನಿ, ರಾಮಮಂದಿರ ಕಟ್ಟಲು ಜನರಿಂದ ಹಣ ಪಡೆದಿರುವುದು ವಿಪರ್ಯಾಸದ ಸಂಗತಿ. ಅಂಬೇಡ್ಕರ್ ಅಂದು ಹೇಳಿದ್ದರು ಶಾಲೆಯೊಂದು ತೆರೆದರೆ ವಿದ್ವಾಂಸರ ಸೃಷ್ಟಿಯಾಗಲಿದೆ- ದೇವಸ್ಥಾನ ಕಟ್ಟಿದರೆ ಭಿಕ್ಷುಕರು ಸೃಷ್ಟಿಯಾಗುವರೆಂದು ಇದನ್ನು ಎಲ್ಲರೂ ಅರಿಯಬೇಕು. ವಿಮಾನ ನಿಲ್ದಾಣ, ಬ್ಯಾಂಕ್, ವಿಮಾ ಸಂಸ್ಥೆಗಳ ಖಾಸಗೀ ಕರಣದ ಮೂಲಕ ಕೇಂದ್ರ ಬಿಜೆಪಿ ಸರ್ಕಾರವು ದೇಶವನ್ನು ಮಾರಾಟಮಾಡುತ್ತಾ ಸಾಗಿದೆ.

ಸಿಎಂ ಯಡಿಯೂರಪ್ಪ ಮಂಡಿಸಿರುವ ಬಜೆಟ್ ಖಾಲಿ ಕೊಡದಲ್ಲಿ ಕಲ್ಲನ್ನು ಹಾಕಿ ಶಬ್ದ ಮಾಡಿದಂತಿದೆ ಎಂದರು.

ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿಡಗೂರು ರುದ್ರೇಶ್ ಮಾತನಾಡಿ ಸರ್ಕಾರ

**ಹೊನ್ನಾಳಿ**

ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ನಾವುಗಳು ತೊಂದರೆ ಅನುಭವಿಸುವಂತಾಗಿದೆ. ಎಸಿ ಹಾಗೂ ಡಿಸಿ ನ್ಯಾಯಾಲಯ, ಹೈಕೋರ್ಟ್‌ಗಳಲ್ಲಿ ದಲಿತರಿಗೆ ವಿರುದ್ಧವಾದ ತೀರ್ಪುಗಳು ಬರುತ್ತಿದ್ದು, ಶಾಸಕ ರೇಣುಕಾಚಾರ್ಯ ತಾಲ್ಲೂಕಿನಲ್ಲಿ ಎಸಿ ಕಛೇರಿ ತೆರೆಯಲು ಆಸಕ್ತಿ ತೋರುತ್ತಿಲ್ಲ ಎಂದರು.

ಪಟ್ಟಣದಲ್ಲಿ ಇದೆ 30 ರ ಒಳಗೆ ಅಂಬೇಡ್ಕರ್ ಸರ್ಕಲ್ ನಿರ್ಮಿಸದಿದ್ದರೆ ಏಪ್ರಿಲ್ 14 ರಂದು ನಾವೇ ಯಾವುದಾದರು ಒಂದು ವೃತ್ತಕ್ಕೆ ಬಿ.ಆರ್. ಅಂಬೇಡ್ಕರ್ ಹೆಸರನ್ನು ನಾಮಕರಣ ಮಾಡಿಕೊಳ್ಳುತ್ತೇವೆ ಎಂದು ತಾಲ್ಲೂಕು ಆಡಳಿತ ಹಾಗೂ ಶಾಸಕರಿಗೆ ಎಚ್ಚರಿಕೆ ನೀಡಿದರು. ದಲಿತ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹದ ಹಣ ವನ್ನು ಮುಂದುವರೆಸುವಂತೆ ಒತ್ತಾಯಿಸಿದರು.

ಟಿ.ಬಿ. ವೃತ್ತದಿಂದ ಮೆರವಣಿಗೆ ನಡೆಸಿದ ಸಮಿತಿಯು ತಹಶೀಲ್ದಾರ್ ಬಸವನಗೌಡ ಅವರಿಗೆ ಮನವಿ ಸಲ್ಲಿಸಿದರು. ಸಮಿತಿಯ ಅಧ್ಯಕ್ಷ ಪರಮೇಶ್ , ಪ್ರಮುಖರಾದ ಆರ್. ನಾಗಪ್ಪ, ಬಡಾವಣೆ ರಾಜಪ್ಪ, ಸಮಿತಿ ಜಿಲ್ಲಾ ಸಂಚಾಲಕ ಕುಂದವಾಡ ಮಂಜುನಾಥ, ಜಿಲ್ಲಾ ಉಪಾಧ್ಯಕ್ಷ ಬಸವರಾಜ್, ಶಿವಮೊಗ್ಗ ರಾಘವೇಂದ್ರ, ದಿಡಗೂರು ರುದ್ರೇಶ್, ಶಿಕಾರಿಪುರ ಬಸವರಾಜ್, ನಳಿನಕೊಪ್ಪ ಉಮೇಶ್, ಬನ್ನಿಕೋಡು ರುದ್ರೇಶ್ ಹಾಗೂ ಮತ್ತಿತರರಿದ್ದರು.

# ಪಟ್ಟಣ ಪಂಚಾಯ್ತಿ ಆಸ್ತಿ ತೆರಿಗೆ ಪರಿಷ್ಕರಣೆಗೆ ಅನುಮೋದನೆ



**ಜಗಳೂರು**


ಜಗಳೂರು, ಮಾ.11- ಸರ್ಕಾರದ ಮಾರ್ಗಸೂಚಿ ಅನ್ವಯ ಪಟ್ಟಣದಲ್ಲಿನ ವಾಸದ ಮನೆ ಹಾಗೂ ವಾಣಿಜ್ಯ ಕಟ್ಟಡಗಳಿಗೆ ಆಸ್ತಿ ತೆರಿಗೆ ಪರಿಷ್ಕರಿಸುವ ಬಗ್ಗೆ ಚರ್ಚಿಸಿ ಅನುಮೋದನೆ ನೀಡಲಾಯಿತು.

ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ಪ.ಪಂ. ಅಧ್ಯಕ್ಷ ತಿಪ್ಪೇಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಭೆಯಲ್ಲಿ ಮುಖ್ಯ ಅಧಿಕಾರಿ ರಾಜು ಬಣಕಾರ್ ಸರ್ಕಾರದ ಸುತ್ತೋಲೆಯ ಬಗ್ಗೆ ಮಾಹಿತಿ ನೀಡಿದರು.

1957 ರ ಸೆಕ್ಷನ್ 45 ಬಿ ಅಡಿಯಲ್ಲಿ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಶೇ.25 ರಷ್ಟು ಪರಿಗಣಿಸುವಂತೆ ಮತ್ತು ವಾಸದ ವಾಣಿಜ್ಯೇತರ ಸ್ವತ್ತು ತೆರಿಗೆಯನ್ನು ಕಟ್ಟಡಗಳ ಮೂಲ ಬೆಲೆಯ ಶೇ. 0.2 ಕ್ಕಿಂತ ಕಡಿಮೆ 1.5 ಹೆಚ್ಚಿಗೆ ಇಲ್ಲದಂತೆ ವಿಧಿಸುವುದು ಹಾಗೂ ತೆರಿಗೆಗೆ ಒಳಪಡುವ ಖಾಲಿ ಭೂಮಿಗೆ 0.2 ಕಡಿಮೆಯಿಲ್ಲದೆ 0.5 ರಷ್ಟು ಹೆಚ್ಚಿಲ್ಲ ದಂತೆ ನಿರ್ಧರಿಸುವುದು, ಬೇರೆ ಬೇರೆ ಪ್ರದೇಶದಲ್ಲಿನ ಬೇರೆ ಬೇರೆ ಭೂಮಿ ವರ್ಗಗಳ ಮೇಲೆ ತೆರಿಗೆಯನ್ನು ಶೇ.3 ರಿಂದ ಶೇ. 5 ರಷ್ಟು ಹೆಚ್ಚಿಸುವುದು ಸೇರಿದಂತೆ ಪರಿಷ್ಕೃತ ತೆರಿಗೆಯನ್ನು ಏಪ್ರಿಲ್ 1 ರಿಂದ ಪಾವತಿಸಿಕೊಳ್ಳುವಂತೆ ಸರ್ವಾನುಮತದಿಂದ ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಪ.ಪಂ. ಉಪಾಧ್ಯಕ್ಷೆ ಲಲಿತ ಶಿವಣ್ಣ, ಸದಸ್ಯರಾದ ಪಾಪಲಿಂಗಪ್ಪ, ರೇವಣ್ಣ, ದೇವರಾಜ್, ನವೀನ್ ಕುಮಾರ್, ಮಂಜಣ್ಣ, ನಾಮನಿರ್ದೇಶಿತ ಸದಸ್ಯ ರುದ್ರಮುನಿ, ಕಂದಾಯ ನಿರೀಕ್ಷಕ ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

# ಪ್ರಾಧಿಕಾರದ ಗಮನ ಸೆಳೆದ 'ಸೂಜಿ'



ದಾವಣಗೆರೆಯ ಸಾಹಿತ್ಯ ಲೋಕದಲ್ಲೇ ಕೃತಿ ಮುದ್ರಣವಾದ ಒಂದು ತಿಂಗಳ ಅಂತರದಲ್ಲೇ ಎರಡನೇ ಮುದ್ರಣ ಕಂಡ ಮೊದಲ ಕಾದಂಬರಿ 'ಸೂಜಿ'. ಅದಲ್ಲದೇ 'ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು' ಇವರ ಧನಸಹಾಯ ಪಡೆದ ಕೃತಿಯೆಂಬ ಹೆಮ್ಮೆಯ ಗರಿ ಸಿಕ್ಕಿದೆ. ವೃತ್ತಿಯಲ್ಲಿ ಮರಗೆಲಸಗಾರ ಹಾಗೂ ಪತ್ರಿಕಾ ವಿತರಕ. ಆದರೆ, ಪ್ರವೃತ್ತಿಯಲ್ಲಿ ಕವಿ, ಕಾದಂಬರಿಕಾರ. ಎಸ್. ಗುರುಬಸವರಾಜ (ಪಾಪುಗುರು) ರವರ ಚೊಚ್ಚಲ ಕಾದಂಬರಿ 'ಸೂಜಿ' ಓದಲು ಶುರು ಮಾಡಿದ ಮೊದಲ ಪುಟದಿಂದ ಕೊನೆಯ ಪುಟದವರೆಗೂ ಪದಸಂಪತ್ತು ಉಳಿಸಿಕೊಳ್ಳುವ ಪುಸ್ತಕ. ಅದರ ಓದುಗಳಾಗಿ ನಾ ಅಕ್ಷರದೊಳಗಿಳಿದ ಪರಿ ಇದು.

ಪ್ರತಿಯೊಬ್ಬ ಮನುಷ್ಯನಲ್ಲಿ ಸುಪ್ತ ಭಾವನೆಗಳು ಬೀಜದೊಳಗಿನ ಎಣ್ಣೆಯಂತೆ, ಪುಷ್ಪದೊಳಗಿನ ಸುಗಂಧದಂತೆ ಅಡಕವಾಗಿರುತ್ತವೆ. ಆದರೆ, ಆ ಸುಪ್ತ ಭಾವನೆಗಳು ಬೇರೆಯವರಿಗೆ ಕಾಣಿಸುವುದಿಲ್ಲ. ಬದುಕು ಎನ್ನುವ ನಾಟಕದಲ್ಲಿ, ಅನೇಕ ವೇಷಗಳಿಂದ, ವಿಭಿನ್ನ ಮುಖವಾಡಗಳಿಂದ ಅವರವರ ಪಾತ್ರಕ್ಕೆ ತಕ್ಕಂತೆ ನಟಿಸುವವರೇ ಬಹಳ. ನಿಜವಾದ ಭಾವನೆಗಳಿಂದ ನಟಿಸುವವರು ವಿರಳ. ಆದರೆ, ವಿಧಿಯ ಆಟವೇ ಬೇರೆಯಾಗಿರುತ್ತದೆ. ವಿಧಿಯ ನಾಟಕವೆಂಬ ಆಟದಲ್ಲಿ ಪಾತ್ರಧಾರಿಗಳ ಮುಖವಾಡಗಳು ಕಳಚಿ ಬೀಳುತ್ತವೆ.

ನಿಜವಾದ ಸುಪ್ತ ಭಾವನೆಗಳು ಗೋಚರಿಸುತ್ತವೆ. ಈ ಸುಪ್ತ ಭಾವನೆಗಳು ಮನಸ್ಸಿನ ಅಥವಾ ದೈಹಿಕ ಭಾವನೆಗಳಿಗೆ ಸಂಬಂಧಿಸಿರಬಹುದು. ಸಮಾಜಕ್ಕಾಗಲೀ ವೈಯುಕ್ತಿಕವಾಗಲೀ ಕೆಲವೊಂದು ಭಾವನೆಗಳು ಪೂರಕವಾಗಿರಬಹುದು. ಇಲ್ಲವೇ ಮಾರಕವಾಗಿರಬಹುದು. ಇಂತಹ ಸುಪ್ತ ಭಾವನೆಗಳಿಗೆ ಜೀವ ತುಂಬಿ ಆ ಕಥೆಯನ್ನೇ ಅಕ್ಷರಗಳ ರೂಪದಲ್ಲಿ ಸರಳ ಭಾಷೆ ಬಳಸಿ ಕಾದಂಬರಿ ರಚಿಸಿ, ಓದುಗರಿಗೆ ನೀಡಿದ ಕೃತಿ 'ಸೂಜಿ'.

ಇಲ್ಲಿ ಲೇಖಕರಿಗೆ ಭಾಷೆಯ ಮೇಲೆ ಹಿಡಿತವಿದೆ. ನಿಜ ಜೀವನದ ನೈಜ ಅನುಭವವನ್ನು ನಿರೂಪಿಸಿ, ಸುಮಾರು ಮೂವತ್ತು ಅಧ್ಯಾಯಗಳಲ್ಲಿ ಪ್ರೀತಿ, ಕಾಮ, ಬಯಕೆಗಳನ್ನು ಮೂಲವಾಗಿಟ್ಟುಕೊಂಡು ಬರೆದ ಈ ಕಾದಂಬರಿ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಓದುಗರ ಮನಸ್ಸಿನಲ್ಲಿ ಅವರ ಜೀವನದಲ್ಲಿ ಎಲ್ಲೋ ಕೇಳಿದಂತೆ ಅಥವಾ ನೋಡಿದಂತೆ ಭಾಸವಾಗಿ ಆ ಘಟನೆಗಳನ್ನು ಆಳವಾಗಿ ಮನದಲ್ಲಿ ಬೇರೂರಿಸುತ್ತದೆ. ಬಹಳ ಕುತೂಹಲ ಕಾಯ್ದಿರಿಸಿಕೊಂಡ ಲೇಖಕರ ಕೃಷಿ ಚೊಚ್ಚಲ ಕಾದಂಬರಿಯಲ್ಲೇ ಅಭಿವ್ಯಕ್ತಗೊಂಡಿದೆ.

ಸಾಮಾಜಿಕ ಕಾಳಜಿಯಿಂದ ಸಮಾಜಕ್ಕೆ ಬೇಕಾಗಿರುವ ಸೂಕ್ತ ವಸ್ತುವನ್ನು ಆಯ್ಕೆ ಮಾಡಿಕೊಂಡು ಕೃತಿ ರಚಿಸಿದರೆ, ಮುಂದಿನ ದಿನಮಾನಗಳಲ್ಲಿ ಇನ್ನೂ ಉತ್ತಮ ಬರಹಗಾರರಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಉತ್ತಮ ಸಾಹಿತ್ಯ ಕೃಷಿಗೈದರೆ ಸಫಲತೆ ಕಾಣಬಹುದು. ಆದರೆ, ಅದು ಅಷ್ಟೊಂದು ಸುಲಭ ವಲ್ಲ. ಹೌದು ಬಯಕೆಗಳೇ ಮನುಷ್ಯ ಜೀವನದ ಅವಿಭಾಜ್ಯ ಅಂಗಗಳೇ ಆದರೆ, ಆ ಬಯಕೆಗಳನ್ನು ಪೂರೈಸಿಕೊಳ್ಳಲು ಉತ್ತಮ ದಾರಿ ಕಂಡುಕೊಳ್ಳಬೇಕು. ಆ ದಾರಿ ಋಣಾತ್ಮಕ ಹಾಗೂ ಸಮಾಜಕ್ಕೆ ಮಾರಕವಾದ ಮಾರ್ಗವಾಗಿರಬಾರದು. ಸನ್ಮಾರ್ಗಗಳು ಮುಕ್ತವಾಗಬೇಕು. ಆದರೆ, ಸಮಾಜದಲ್ಲಿರುವ ಕಟ್ಟುಪಾಡುಗಳಿಗೆ ತಲೆಬಾಗಲೇಬೇಕು.

ಕನ್ನಡ ಸಾಹಿತ್ಯಲೋಕ ಅನೇಕ ದಿಗ್ಗಜರನ್ನು ಹಾಗೂ ಎಂಟು ಜ್ಞಾನಪೀಠ ಪ್ರಶಸ್ತಿ ಕಂಡ ಲೋಕ. ಈ ಸಾಹಿತ್ಯಲೋಕದ ಸಹೃದಯಿ ಓದುಗರು ಹೊಸ ಲೇಖಕರನ್ನು ಸ್ವಾಗತಿಸೋಣ.

**- ಡಾ.ಅನಿತಾ ಹೆಚ್.ದೊಡ್ಡಗೌಡರ್,**
ಸಹಾಯಕ ಪ್ರಾಧ್ಯಾಪಕರು
ಎಸ್.ಎಸ್.ಎಂ.ಬಿ. ಮಹಾವಿದ್ಯಾಲಯ
ದಾವಣಗೆರೆ- 9902198655

## ಬಿ. ಕಲಪನಹಳ್ಳಿ : ಮಹಾಶಿವರಾತ್ರಿ ಸಪ್ತಾಹದಲ್ಲಿ ಇಂದು



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ಮಹಾ ಶಿವರಾತ್ರಿ ಪ್ರಯುಕ್ತ ಮಹಾಶಿವರಾತ್ರಿ ಸಪ್ತಾಹ ಹಾಗೂ ಶರಣ ಬಸವೇಶ್ವರ ರಥೋತ್ಸವವನ್ನು ಮಾರ್ಚ್ 12 ರವರೆಗೆ ಹಮ್ಮಿಕೊಳ್ಳಲಾಗಿದೆ.

ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಇಂದು ಬೆಳಿಗ್ಗೆ 8 ಗಂಟೆಗೆ ಭಕ್ತಾದಿಗಳಿಂದ ಪೂಜಾ ಸೇವೆಗಳು ನಡೆಯುವವು. ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ನಡೆಯುವುದು. ಪ್ರಾಸ್ತಾವಿಕ ನುಡಿಯನ್ನು ಜಿ. ಮುರಿಗೆಪ್ಪ ನಡೆಸಿಕೊಡುವರು. ಮುದೇಗೌಡ್ರ ಗಿರೀಶ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಎಸ್.ಎ. ರವೀಂದ್ರನಾಥ್, ಎಸ್.ಎಸ್ ಮಲ್ಲಿಕಾರ್ಜುನ್, ಹೆಚ್.ಡಿ. ಮಹೇಶ್ವರಪ್ಪ ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಎಸ್.ಟಿ. ಶಾಂತಗಂಗಾಧರ, ವಾಮದೇವಪ್ಪ, ರೇಣುಕಾ ಬಿ. ಕರಿಬಸಪ್ಪ, ಕೃಪ ಟಿ, ಬಿ.ಜಿ. ಸಂಗಪ್ಪ, ಎಂ.ಕೆ. ರೇವಣಸಿದ್ದಪ್ಪ, ತೋಟದ ರಾಜಣ್ಣ, ಬಿ. ಪ್ರಭು, ಕೆ.ಎಂ. ರೇವಣಸಿದ್ದಪ್ಪ, ಎಂ. ಪರಶುರಾಮ್, ಹೆಚ್. ಮಂಜಪ್ಪ, ಸುಶೀಲಮ್ಮ ರಮಾನಂದಪ್ಪ, ಕೆ.ಜಿ. ಉಜ್ಜಪ್ಪಗೌಡ್ರು, ರೇವಮ್ಮ ಕೆ.ಎಂ. ನಾರಪ್ಪ, ಚೇತನ್ ಎಸ್. ನಾಡಿಗರ್, ರತ್ನಮ್ಮ ಮಂಜಪ್ಪ ಅವರುಗಳು ಉಪನ್ಯಾಸ ನೀಡುವರು.

## ರಾಣೇಬೆನ್ನೂರು : ಗಾಯತ್ರಿ ಮಹಾಯಜ್ಞದ ವಾರ್ಷಿಕೋತ್ಸವ

ರಾಣೇಬೆನ್ನೂರು, ಮಾ.11- ಸ್ಥಳೀಯ ಶ್ರೀ ಗಾಯತ್ರಿ ಸಮೂಹ ಮತ್ತು ಬಿಎಜೆಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ರಾಣೇಬೆನ್ನೂರಿನಲ್ಲಿ ಜರುಗಿದ ಕೋಟಿ ಗಾಯತ್ರಿ ಮಹಾಯಜ್ಞದ 15 ನೇ ವಾರ್ಷಿಕೋತ್ಸವ ಇದೇ ದಿನಾಂಕ 14 ರಂದು ನಡೆಯಲಿದೆ.

## ಎಪಿಎಂಸಿಗೆ ಕುಲುಮಿ ಅಬ್ದುಲ್ಲಾ



ಹರಪನಹಳ್ಳಿ, ಮಾ.11- ಸ್ಥಳೀಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಒಂದು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿ. ಕುಲುಮಿ ಅಬ್ದುಲ್ಲಾ ಅವರು ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.

ಟಿಎಪಿಸಿಎಂಎಸ್ ನಿಂದ ಎಪಿಎಂಸಿಗೆ ಆಯ್ಕೆ ಯಾಗಬೇಕಾದ ಒಂದು ಸ್ಥಾನಕ್ಕೆ ಕುಲುಮಿ ಅಬ್ದುಲ್ಲಾ, ಯು. ಹನುಮಂತಪ್ಪ ಸ್ಪರ್ಧಿಸಿದ್ದರು. ಅದರಲ್ಲಿ ಕುಲುಮಿ ಅಬ್ದುಲ್ಲಾ 9 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಒಟ್ಟು 15 ನಿರ್ದೇಶಕರಲ್ಲಿ ಒಬ್ಬ ಗೈರಾಗಿದ್ದು, ಉಳಿದ 14 ಜನರು ಮತದಾನದಲ್ಲಿ ಪಾಲ್ಗೊಂಡಿದ್ದರು. ತಹಸೀಲ್ದಾರ್ ಎಲ್.ಎಂ. ನಂದೀಶ್ ಚುನಾವಣಾಧಿಕಾರಿಯಾಗಿದ್ದರು.

# ಸರ್ವಜ್ಞ ಸಂಶೋಧನಾ ಪೀಠದ ಉದ್ಘಾಟನೆ




ದಾವಣಗೆರೆ, ಮಾ 11 - ಶ್ರೀ ಸರ್ವಜ್ಞ ಸಂಶೋಧನಾ ಪೀಠದ ಉದ್ಘಾಟನಾ ಕಾರ್ಯಕ್ರಮ ಜಯನಗರದ ಕುಂಭಶ್ರೀ ಸದನದಲ್ಲಿ ನೆರವೇರಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಾನಪದ ವಿದ್ವಾಂಸ ಡಾ.ಮಲ್ಲಿಕಾರ್ಜುನ ಕಲಮರಹಳ್ಳಿ ಅವರು ಅಲಕ್ಷಿತ ದಾರ್ಶನಿಕರ, ತತ್ವಜ್ಞಾನಿಗಳ, ಸಮುದಾಯಗಳ ಸಂಸ್ಕೃತಿ ಸಂಶೋಧನೆಯ ಗುರಿಯನ್ನು ಇಟ್ಟುಕೊಂಡು ಜನ್ಮ ತಾಳಿರುವ ಸರ್ವಜ್ಞ ಸಂಶೋಧನಾ ಪೀಠ ಎಲ್ಲಾ ಧರ್ಮ, ಮತ, ಜಾತಿಗಳ ಅಲಕ್ಷಿತ ದಾರ್ಶನಿಕರ ಬಗ್ಗೆ ಸಂಶೋಧನೆ ನಡೆಸಿ ಬೆಳಕು ಚೆಲ್ಲುವ ಗುರಿ ಹೊಂದಿರುವುದು ಸ್ವಾಗತಾರ್ಹವಾಗಿದ್ದು, ಇಂತಹ ಜಾತ್ಯತೀತ ಸಂಶೋಧನಾ ಪೀಠ ಸ್ಥಾಪಿಸಿರುವ ಸಂಶೋಧಕ ಡಾ.ಬುರುಡೇಕಟ್ಟೆ ಮಂಜಪ್ಪ ಅವರು ಅಭಿನಂದನಾರ್ಹರು. ಇದುವರೆಗೂ ಅಲಕ್ಷಿತ ಸಮುದಾಯಗಳ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಮತ್ತು ಪ್ರಬುದ್ಧತೆಯ ಸಂಶೋಧನೆಗಳು ಆಗಿಲ್ಲ.ಅಲಕ್ಷಿತ ಸಮುದಾಯಗಳ ಬಗ್ಗೆ ಅಲಕ್ಷಿತರೆ ಹೋರಾಟ ಮಾಡಬೇಕಾಗಿರುವುದು ವಿಪರ್ಯಾಸವಾಗಿದೆ. ಸರ್ವಜ್ಞ ಸಂಶೋಧನಾ ಪೀಠ ಜಾತ್ಯತೀತವಾದ ನೆಲಗಟ್ಟಿನಲ್ಲಿ ಪ್ರಬುದ್ಧವಾಗಿ ಬೆಳೆಯಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ಬಸವರಾಜ ಕುಂಚೂರ್ ವಹಿಸಿದ್ದರು. ಸರ್ವಜ್ಞ ಸಂಶೋಧನಾ ಪೀಠದ ಸಂಸ್ಥಾಪಕ ಅಧ್ಯಕ್ಷ ಡಾ.ಬುರುಡೇಕಟ್ಟೆ ಮಂಜಪ್ಪ, ಜಾನಪದ ಕಲಾವಿದ, ಪ್ರಸಿದ್ಧ ಗೊಟಗೋಡಿ ಮೂರ್ತಿ ಕಲಾವಿದ ಬಸವರಾಜ್ ಚ. ಕುಂಬಾರ್, ದಾವಣಗೆರೆ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತ್ ಅಧ್ಯಕ್ಷ ರಾಜಶೇಖರ ಗುಂಡಗಟ್ಟಿ, ಲಲಿತಕಲಾ ಕಾಲೇಜಿನ ಪ್ರಾಧ್ಯಾಪಕ ಹರೀಶ್, ಸದಾಶಿವಣ್ಣ, ಸಂಶೋಧಕ ಕೆ.ಎಂ. ರಾಘವೇಂದ್ರಚಾರ್, ರಾಣೇಬೆನ್ನೂರಿನ ನಾಗರಾಜ್ ಬಿ. ಚಕ್ರಸಾಲಿ, ರಾಜಸ್ಥಾನದ ಜೈಪುರದ ಅನಿಲ್, ಮೋಹನ್, ಉಪನ್ಯಾಸಕ ಕರಿಬಸಪ್ಪ, ಹಾಗೂ ಇತರರು ಇದ್ದರು.

ಕಾರ್ಯಕಮದಲ್ಲಿ ಪ್ರಾಚೀನ ತಾಳೆಗರಿ, ತಾಮ್ರಪತ್ರ , ಪ್ರಾಚೀನ ಹಸ್ತಪ್ರತಿಗಳ ಭಂಡಾರದ ಉದ್ಘಾಟನೆ ನೇರವೇರಿಸಿ ಪ್ರದರ್ಶನ ಮಾಡಲಾಯಿತು.

## ರಾಜಸ್ಥಾನ ಗ್ರಾಮೀಣ ಮೇಳ ಉದ್ಘಾಟನೆ



ದಾವಣಗೆರೆ, ಮಾ. 11- ನಗರದ ಗುರು ಭವನದಲ್ಲಿ ರಾಜಸ್ಥಾನ ಗ್ರಾಮೀಣ ಮೇಳವನ್ನು ಮಹಾನಗರ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಉದ್ಘಾಟಿಸಿದರು. ಈ ಮೇಳವು ಏಪ್ರಿಲ್ 4 ರವರೆಗೆ ನಡೆಯಲಿದೆ.

## ಹರಿಹರ : ಇಂದು ಜನಸ್ಪಂದನ ಕಾರ್ಯಕ್ರಮ

ಹರಿಹರ ನಗರಸಭೆಯಲ್ಲಿ ಶಾಸಕ ಎಸ್. ರಾಮಪ್ಪ ಅವರಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ವರೆಗೆ ಜನಸ್ಪಂದನಾ ಕಾರ್ಯ ಕ್ರಮ ಹಮ್ಮಿಕೊಂಡಿದ್ದು, ಅಹವಾಲು ಸ್ವೀಕರಿಸಲಿದ್ದಾರೆ.

ನಗರಸಭಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ತಮ್ಮ ಕುಂದು ಕೊರತೆಗಳ ಬಗ್ಗೆ ಮನವಿ ಸಲ್ಲಿಸುವಂತೆ ಪೌರಾಯುಕ್ತರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಕರುನಾಡ ಸಮರ ಸೇನೆಯಿಂದ ಮಹಿಳಾ ದಿನಾಚರಣೆ

ದಾವಣಗೆರೆ, ಮಾ.11- ಕರುನಾಡ ಸಮರ ಸೇನೆ ಮಹಿಳಾ ಜಿಲ್ಲಾ ಘಟಕದ ವತಿಯಿಂದ ವಿಶ್ವ ಮಹಿಳಾ ದಿನವನ್ನು ಆಚರಿಸಲಾಯಿತು.

ಜಿಲ್ಲಾಧ್ಯಕ್ಷೆ ಮಾಲಾ ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮಹಾಪೌರರಾದ ರೇಖಾ ನಾಗರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ಸಂಚಾರಿ ಸಬ್ ಇನ್‌ಸ್ಪೆಕ್ಟರ್ ಜಯಶೀಲ ಅವರು, ಮಹಿಳೆಯರ ಸುರಕ್ಷತೆ, ಸ್ವಯಂ ರಕ್ಷಣೆಯ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಗೌರವಿಸಲಾಯಿತು. ನಂದಾ ಹೊಸ ಅಂಗಡಿ, ಉಮಾದೇವಿ, ಪ್ರೇಮಾ ಜಗದೀಶ್ವರಿ, ರಾಧಾ ರೆಡ್ಡಿ, ಮಮ್ತಾಜ್ ಸೇರಿದಂತೆ ಜಿಲ್ಲಾ, ತಾಲ್ಲೂಕು ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗ ದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
40x60 East, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, 30x50 West ವಾಜಪೇಯಿ ಲೇಔಟ್‌ನಲ್ಲಿ, 30x45 North west Corner ಬಸವೇಶ್ವರ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ ಮಾವಿನತೋಪು ಹಾಸ್ಪಿಟಲ್ ಹಿಂಭಾಗದಲ್ಲಿ 40x60 North ಮೂರು ಬೆಡ್ ರೂಂ ಮನೆ ಇಂಡಿಪೆಂಡೆಂಟ್ ಹೌಸ್
ರಿಯಲ್ ಎಸ್ಟೇಟ್ ಏಜೆಂಟ್
ಐನಳ್ಳಿ ಚನ್ನಬಸಪ್ಪ
99166 12110

**ಬೇಕಾಗಿದ್ದಾರೆ**
ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್, ಕಂಪ್ಯೂಟರ್ ಆಪರೇಟರ್
ಆಮಂತ್ರಣ
ಬಟ್ಟೆ ಅಂಗಡಿ, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. 97400-01117

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ವಿನಾಯಕ ಬಡಾವಣೆಯಲ್ಲಿ 40x60 ಅಕ್ಕ-ಪಕ್ಕ, ಸಪ್ತಗಿರಿ ಹಾಸ್ಟೆಲ್, ಬಸವೇಶ್ವರ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಂ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಸ್ಯಾನಿಟರಿ ಹಾಗೂ ಪೈಪುಗಳ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಬೆಳಿಗ್ಗೆ 12 ರಿಂದ 2 ರವರೆಗೆ
ಅಂದನೂರು ಸೆರಾಮಿಕ್ಸ್
ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಹತ್ತಿರ ಪಿ.ಬಿ. ರಸ್ತೆ, ದಾವಣಗೆರೆ.

**ಸೈಟ್ ಬೇಕಾಗಿದೆ**
ವಿದ್ಯಾನಗರ, ವಿನಾಯಕ, ತರಳಬಾಳು ಮತ್ತು ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ಸೈಟು ಬೇಕಾಗಿರುತ್ತದೆ. ಸಂಪರ್ಕಿಸಿ
98809 33630

**ಸೋಫೈ ಮೆಸ್ ಮಾಡುತ್ತೇವೆ**
ನಮ್ಮಲ್ಲಿ ಸೋಫೈ ಮೆಸ್, ಎಲ್ಲಾ ತರಹದ ಕುಷನ್ ಸೋಫಾ, ಎಲ್ಲಾ ಬೆಡ್ ಸ್ಪಾಂಜ್, ವುಡ್ ಪಾಲಿಶ್ ಮಾಡುತ್ತೇವೆ. ರಿಪೇರಿ ಸಹ ಮಾಡುತ್ತೇವೆ.
98452 79197, 74830 88761

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ರಾಜ್ ಹಂಸ್ ಕಲೆಕ್ಷನ್ಸ್
ಚಾಮರಾಜ ಪೇಟೆ, ದಾವಣಗೆರೆ.
94486 68077

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
7406740635
74063 96332

ರಕ್ತ ದಾನ ಶ್ರೇಷ್ಠ ದಾನ

**ಸೈಟ್ ಮಾರುವುದಿದೆ**
Size : 20 x 34 1/2
P.B. Road, Milk Dairy Near Bathi, Davanagere.
99005 47328

**ಬೇಕಾಗಿದ್ದಾರೆ**
ನಮ್ಮ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು PUC ಫೇಲ್ ಅಥವಾ ಪಾಸ್ ಆದ ಹುಡುಗರು ಬೇಕಾಗಿದ್ದಾರೆ.
ಜಿ.ಎಸ್.ಗಂಗಾಧರ್
ಮೊ: 98865 52688

**ಬೇಕಾಗಿದ್ದಾರೆ**
ಹೋಲ್‌ಸೇಲ್ ಔಷಧಿ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪಾರ್ಟ್ ಟೈಂ or ಫುಲ್ ಟೈಂ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮಾತ್ರ.
ವೆಂಕಟೇಶ್ವರ ಫಾರ್ಮಾಸ್ಯೂಟಿಕಲ್ಸ್
ಕೆ.ಟಿ.ಜೆ. ನಗರ, ದಾವಣಗೆರೆ.
86607 75329

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ (ಗ್ರೌಂಡ್) 3 ಬೆಡ್ ರೂಂ (ಮಹಡಿ, 2 ಅಟ್ಯಾಚ್‌ನೊಂದಿಗೆ)
ಎಸ್.ಎಸ್. ಬಡಾವಣೆ, ಬಿ ಬ್ಲಾಕ್.
(ಸಸ್ಯಹಾರಿಗಳಿಗೆ ಮಾತ್ರ)
94488 05950

**ಮನೆ ಲೀಸ್‌ಗೆ ಇದೆ**
ಫಸ್ಟ್ ಫ್ಲೋರ್, 2BHK ವಿತ್ ಅಟ್ಯಾಚ್, ಸುಸಜ್ಜಿತವಾಗಿರುವ ಹಾಗೂ 2ನೇ ಫ್ಲೋರ್ 1BHK ವಿತ್ ಅಟ್ಯಾಚ್, ಸೌಲಭ್ಯವಿರುವ ಮನೆಗಳು ಲೀಸ್‌ಗೆ ಇವೆ. ಆಸಕ್ತರು ಸಂಪರ್ಕಿಸಿ: # 389/G-54, S.S. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನ ಹಿಂಭಾಗ, ಜಯನಗರ 'ಎ' ಬ್ಲಾಕ್, ದಾವಣಗೆರೆ.
98447 10844, 88843 62134

**ಬೇಕಾಗಿದ್ದಾರೆ**
ಕಂಪನಿಯ ಪ್ರಚಾರಕ್ಕಾಗಿ ಡಿಜಿಟಲ್ ಮಾರ್ಕೆಟಿಂಗ್ ಹಾಗೂ ಗ್ರಾಫಿಕ್ ಡಿಸೈನಿಂಗ್ ಕೆಲಸಕ್ಕೆ ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
62628 60608

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**FOR LEASE AND SALE**
3BHK Flats For Lease And Sale
AM BUILDERS AND DEVELOPERS
M C C B Block And Vidyanagar, Davanagere
CONTACT
97389 81457
95916 08453

**ಬೇಕಾಗಿದ್ದಾರೆ**
ಮಲ್ಟಿಪ್ಲೆಕ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಮೈಕ್ರೋನ್ಯೂಟ್ರಿಯಂಟ್ ಕಂಪನಿಯಲ್ಲಿ 5 ವರ್ಷ ಕೆಲಸ ಮಾಡಿರುವ ಅನುಭವ ಹೊಂದಿರಬೇಕು.
ಸ್ಥಳ : ಚಳ್ಳಕೆರೆ, ಚಿತ್ರದುರ್ಗ, ಹರಿಹರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99455 47626, 99457 13454, 86605 93957

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಮಾರಾಟಕ್ಕೆ ಇದೆ**
30×50 ಸೈಟ್‌ನಲ್ಲಿ 2 ಬೆಡ್‌ರೂಂನ ಆಧುನಿಕ ವ್ಯವಸ್ಥೆಯುಳ್ಳ, ವಾಸ್ತು ಪ್ರಕಾರ ಕಟ್ಟಿರುವ, ಪಶ್ಚಿಮ ದಿಕ್ಕಿನ ಮನೆ, ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕೆ ಇದೆ. ವಿಚಾರಿಸಿ :
98448 82366

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಆಯಾಗಳು ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನುರಿತ ಅನುಭವವುಳ್ಳ ಆಯಾ ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋ ಡೇಟಾದೊಂದಿಗೆ ಬಂದು ವಿಚಾರಿಸಿ.
ಮೊ. 98450 35710
ಡಾ. ಎಂ.ಎಸ್. ಹಿರೇಮಠ್

**ಕೆಲಸಗಾರರು ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮಹಿಳೆ-01, ಮೆಕ್ಯಾನಿಕ್ (ದ್ವಿ ಚಕ್ರ ವಾಹನಗಳ ಅನುಭವ) -01, ಹೆಲ್ಪರ್ -01, ಸೇಲ್ಸ್ ರೆಪ್ರೆಸೆಂಟೇಟಿವ್ -02
ಶ್ರೀ ಸುಬ್ರಮಣ್ಯ ಮೋಟಾರ್ಸ್
ಮಲೇಬೆನ್ನೂರು
90085 40552

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ (Return Gift) 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
94805 64551, 91418 74551

**JOBS**
MCS ACADEMY
Training & Placement Cell
98444 92888

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**Raksha Charitable and Educational Trust (R.)**
**REQUIRED**
Pro's Staff for PU College Admission (Gents and ladies) Telecalling, Contact :
8296376716, 9916818369
Location: Davangere, Harihara, Chitradurga, Harapanalli, Channagiri

**ಸ್ವರ ಭವಿಷ್ಯಂ**
ಶ್ರೀ ಸಾಯಿ ಮಹಾಂಕಾಳಿ ಜ್ಯೋತಿಷ್ಯಾಲಯ
ಪಂಡಿತ್ ಭೀಮರಾವ್ ಭಟ್
ಇವರು ಕೇರಳ ಭಗವತಿ ಶಕ್ತಿ ಪ್ರತಿಷ್ಠಾಪಂ ಆಚಾರ್ಯನ್ ತಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ, ಆರೋಗ್ಯ, ನೀವು ಇಷ್ಟಪಟ್ಟವರು ನಿಮ್ಮಂತೆ ಆಗಲು, ಗ್ರಹಚಾರ ದೋಷ, ಇನ್ನೂ ನಿಮ್ಮ ಯಾವುದೇ ಗುಪ್ತ ಹಲವಾರು ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ.
ಮೊ : 95919 84627


# ಅಂದು ಶಿಷ್ಯನ ಚಿತ್ರ, ಇಂದು ಗುರುವಿನ ಚಿತ್ರ

25 ವರ್ಷಗಳ ಹಿಂದೆ ಗಾನಯೋಗಿ ಪಂಚಾಕ್ಷರಿ ಗವಾಯಿ ಚಿತ್ರ ನಿರ್ದೇಶಿಸಿದ್ದ ಚಿಂದೋಡಿ ಬಂಗಾರೇಶ್ ಈಗ ಹಾನಗಲ್ಲ ಶ್ರೀ ಕುಮಾರೇಶ ಚಿತ್ರ ನಿರ್ದೇಶನಕ್ಕೆ ಸಿದ್ದತೆ ಮಾಡಿಕೊಂಡಿದ್ದಾರೆ.

ಈ ಚಿತ್ರ ನಿರ್ದೇಶನ ಮಾಡುವುದು ಆಕಸ್ಮಿಕವೆಂದು ಹೇಳುತ್ತಾರೆ.

ಮೌನ ತಪಸ್ವಿ (ನಲವತ್ತು ವರ್ಷಗಳಿಂದ ಮೌನ ವ್ರತದಲ್ಲಿರುವ) ಶ್ರೀ ಜಡೆಯ ಶಾಂತಲಿಂಗ ಸ್ವಾಮಿಗಳು ತಮ್ಮ ಆರಾಧ್ಯ ದೈವವಾದ ಕುಮಾರೇಶರ ಜೀವನ ಚರಿತ್ರೆ ಮಾಡಲು ಈಗ ಮೂರು ವರ್ಷಗಳ ಹಿಂದೆ ನನಗೆ ತಿಳಿಸಿದರು. ಪಂಚಾಕ್ಷರಿ ಗವಾಯಿಗಳ ಚಿತ್ರ ಮಾಡುವಾಗಲೇ, ಕುಮಾರ ಸ್ವಾಮಿಗಳ ಬಗ್ಗೆ ಓದಿದ್ದ ನನಗೆ ಮತ್ತೆ ಅವರದೇ ಜೀವನ ಚರಿತ್ರೆ ಮಾಡುವ ಯೋಗ ಬಂದಿದ್ದು ನನ್ನ ಪುಣ್ಯವೆಂದು ಭಾವಿಸುತ್ತೇನೆ.

ವರ್ಷಗಳೆಲ್ಲ ಅವರ ಚರಿತ್ರೆ ಓದಿ, ಕುಮಾರಸ್ವಾಮಿಗಳನ್ನು ಆರಾಧಿಸುವ, ಮಹಾ ಸ್ವಾಮಿಗಳನ್ನು, ಮಠಾಧೀಶರನ್ನು ಸಂಪರ್ಕಿಸಿ, ಅವರ ಆಶೀರ್ವಾದ ಒಪ್ಪಿಗೆ ಪಡೆದು ಚಿತ್ರಕಥೆ ಸಿದ್ಧವಾಗಿ ಈಗ ಅಗಡೀಶ್ ಪ್ರೊಡಕ್ಷನ್ಸ್ ಅಡಿಯಲ್ಲಿ ಕಾರ್ಯರೂಪಕ್ಕೆ ಬರಲಿದೆ.



ಕುಮಾರಸ್ವಾಮಿಗಳೆಂದರೆ ಒಬ್ಬ ವ್ಯಕ್ತಿಯಲ್ಲ, ಒಂದು ಮಹಾಶಕ್ತಿ. 19 ನೇ ಶತಮಾನದ ಯುಗ ಪುರುಷ. ಕರುಣಾಮಯಿ, ಅಖಿಲ ಭಾರತ ವೀರಶೈವ ಮಹಾ ಸಭೆಯ ಸಂಸ್ಥಾಪಕ. ನಾಡಿಗೆ ಸಾವಿರಾರು ಮಠಗಳಿಗೆ ಮಠಾಧೀಶರನ್ನಿತ್ತು, ಸಂಗೀತ ಕ್ಷೇತ್ರಕ್ಕೆ ಪಂಚಾಕ್ಷರಿ ಗವಾಯಿ, ಪುಟ್ಟರಾಜ ಗವಾಯಿಗಳಂತಹ ಪುಣ್ಯ ಪುರುಷರನ್ನು ಕೊಟ್ಟು, ಸಾಹಿತ್ಯ, ಜ್ಞಾನ, ವಿದ್ಯೆ, ಭಕ್ತಿ, ಕಾಯಕ, ದಾಸೋಹದ ಮಹಾಮಂತ್ರವನ್ನು ನಿತ್ಯ ಜಪಮಾಲೆಯಾಗಿ ನಿಂತಿರುವ ಶಿವಯೋಗ ಮಂದಿರದ ಸಂಸ್ಥಾಪಕ, ಬಸವ ತತ್ವದ ಆರಾಧಕ, ಕಾಯಕ ಯೋಗಿ, ಅಮರಜೀವಿ ಹಾನಗಲ್ಲ ಶ್ರೀ ಕುಮಾರೇಶ.

1906 ರಲ್ಲೇ ಶ್ರಮಜೀವಿಗಳಿಗೆ ಕಾಯಕ ನೀಡಲು ಹತ್ತಿ ಜಿನ್ನಿಂಗ್ ಫ್ಯಾಕ್ಟರಿ, ಕೃಷಿ ಹಾಗೂ ಚಿತ್ರಮಂದಿರ ನಿರ್ಮಿಸಿದ್ದರು. ಇಂತಹ ಮಹಾಪುರುಷರ ಜೀವನ ಚರಿತ್ರೆಯನ್ನು ಬೆಳ್ಳಿ ತೆರೆಗೆ ತರಲು ಪ್ರಯತ್ನಿಸುವೆ.

ಈ ಚಿತ್ರಕ್ಕೆ ಡಾ|| ಹಂಸಲೇಖ ಸಂಗೀತ ನೀಡುವರು. ಅದರಲ್ಲೂ ವಿಶೇಷ ಒಂದು ಹಾಡೆಂದರೆ ಭೀಮಕವಿ ವಿರಚಿತ ಬಸವ ಪುರಾಣ 3500 ಸಾಲುಗಳ ಭಾಮಿನಿ ಷಟ್ಪದಿಯಲ್ಲಿ ಇರುವ ಪುರಾಣವನ್ನು 7-8 ನಿಮಿಷಗಳಲ್ಲಿ ಬಸವ ಪುರಾಣದ ಹಾಡನ್ನು ಉತ್ಕೃಷ್ಟವಾಗಿ ರಾಗ ಸಂಯೋಜಿಸಲಿದ್ದಾರೆ. ಇದನ್ನು ಶಂಕರ್ ಮಹಾದೇವನ್ ಹಾಡಲಿದ್ದಾರೆ.

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಬಸವಣ್ಣನವರ ಜೀವನ ಚರಿತ್ರೆಯ ಹಾಡು ಪ್ರಥಮ. ಇದು ನಿರಂತರ ನೆನಪಾಗಿ ಉಳಿಯಬಲ್ಲದೆಂದು ನಮ್ಮ ಆಶಯ. ಗಂಧದ ಕೊರಡಂತೆ ಸಮಾಜಕ್ಕಾಗಿ ದುಡಿದ ಅವರ ಜೀವನ, ಅವರೊಂದಿಗೆ ಇನ್ನೊಂದು ಶಕ್ತಿ ಸಂಗೀತ ವಿದ್ವಾನ್ ಬಾಗಲಕೋಟೆ ಮಲ್ಲಣಾರ್ಯರ ಪಾತ್ರ ಚಿತ್ರಕ್ಕೆ, ಸಮಾಜಕ್ಕೆ ಎರಡು ಶಕ್ತಿಗಳ ಪರಿಚಯ.


ಈ ಎರಡು ಪಾತ್ರಗಳನ್ನು ಮಾಡುವ ಕಲಾವಿದರು ಕನ್ನಡ ನಾಡಿನ ಜನಮಾನಸದಲ್ಲಿ, ಅದರಲ್ಲೂ ಶರಣರ ಸಮೂಹದಲ್ಲಿ ಅಚ್ಚಳಿಯದೆ ಉಳಿಯುವರು.

ಕಲಾವಿದರು ಹಾಗೂ ತಂತ್ರಜ್ಞರ ಆಯ್ಕೆ ನಡೆದಿದೆ. ಜೂನ್ ಅಥವಾ ಜುಲೈನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದು ಬಂಗಾರೇಶ್ ತಿಳಿಸಿದ್ದಾರೆ.

# ದೇವನಗರಿಯಲ್ಲಿ ಶಿವರಾತ್ರಿ ಸಂಭ್ರಮ




ಪಾತಾಳ ಲಿಂಗೇಶ್ವರನ ದರ್ಶನಕ್ಕೆ ಸರದಿ ಸಾಲು



ಮಾರ್ಕಂಡೇಶ್ವರ

**(1ನೇ ಪುಟದಿಂದ)** ವಿವಿಧ ಬಗೆಯ ಹಣ್ಣುಗಳ ಮಾರಾಟದ ಭರಾಟೆ ಹೆಚ್ಚಾಗಿತ್ತು. ವಿಶೇಷವಾಗಿ ಖರಬೂಜ ಹಾಗೂ ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಕಲ್ಲಂಗಡಿ ಹಣ್ಣುಗಳ ರಾಶಿ ಕಾಣಸಿಗುತ್ತಿತ್ತು. ಶಿವನ ಪೂಜೆ, ಅಭಿಷೇಕಕ್ಕೆ ಬೇಕಾದ ಅರ್ಘ್ಯ, ಬಿಲ್ವಪತ್ರೆ ಇತರೆ ವಸ್ತುಗಳನ್ನು ಕೆಲವು ಭಕ್ತರು ಉಚಿತವಾಗಿ ವಿತರಿಸಿದರು.



ಭಕ್ತಿಯ ನಮನ

**ದೇವಸ್ಥಾನದಲ್ಲಿ ಭಕ್ತರ ಜಾತ್ರೆ:** ನಗರದ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ ನಡೆಯಿತು. ಶಿವನ ಮೂರ್ತಿಗೆ ಹೂವಿನ ಅಲಂಕಾರ ಮಾಡಲಾಗಿತ್ತು. ಸಂಜೆಯಿಂದ ತಡ ರಾತ್ರಿ ವರೆಗೆ ಭಕ್ತರು ಸರದಿ ಸಾಲಿನಲ್ಲಿ ನಿಂತು ಸ್ವಾಮಿ ದರ್ಶನ ಪಡೆದರು.

ಪಿ.ಬಿ. ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ, ಪುಷ್ಪಾಲಂಕಾರ ನಡೆಯಿತು. ಸಂಜೆ ಜಾಗರಣೆ ನಂತರ ಫಲಾಹಾರ ವ್ಯವಸ್ಥೆ ಕಲ್ಪಿಸಲಾಗಿತ್ತು.

ನಗದ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಬೆಳಿಗ್ಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿ ನಡೆಯಿತು. ಸಂಜೆ ಈಶ್ವರ ಲಿಂಗುವಿಗೆ ಆರ್ಯವೈಶ್ಯ ಕುಲಬಾಂಧವರಿಂದ ಜಲಾಭಿಷೇಕ, ನಾಲ್ಕು ಯಾಮಗಳ ಅಖಂಡ ಪೂಜೆ ನಡೆಯಿತು.

ಹೊಂಡದ ವೃತ್ತದ ಬಳಿ ಇರುವ ಪಾತಾಳ ಲಿಂಗೇಶ್ವರ ದೇವಸ್ಥಾನದಲ್ಲೂ ಮುಂಜಾನೆ ವಿಶೇಷ ಪೂಜಾದಿ ಕಾರ್ಯಗಳು ನಡೆದವು. ಸಂಜೆ ಸರದಿ ಸಾಲಿನಲ್ಲಿ ನಿಂತು ಭಕ್ತರು ದರ್ಶನ ಪಡೆದರು.

ಜಯದೇವ ವೃತ್ತದಲ್ಲಿರುವ ಕೂಡಲಿ ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಶಾಖಾ ಮಠ ದಲ್ಲಿ ನಾಳೆ (ಮಾ.11) ಶಿವರಾತ್ರಿ ಅಂಗವಾಗಿ ಸಂಜೆ 6 ರಿಂದ 4 ಯಾಮ ಗಳಲ್ಲಿ ನಿರಂತರ ಅಭಿಷೇಕ ಏರ್ಪಡಿಸಲಾಗಿತ್ತು. ಸಂಜೆ ಭಕ್ತರಿಗೆ ಅಭಿಷೇಕಕ್ಕೆ ಅವಕಾಶ ನೀಡಲಾಗಿತ್ತು.

ವಿದ್ಯಾನಗರದ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಮುಂಜಾನೆ ರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ ನಡೆಯಿತು. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪಿ.ಜೆ. ಬಡಾವಣೆಯ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಭಕ್ತರಿಗೆ ಅಭಿಷೇಕ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಸರಸ್ವತಿ ನಗರದ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಶಿವರಾತ್ರಿ ಅಂಗವಾಗಿ ಜಾಗರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



ಕಾಶಿ ವಿಶ್ವನಾಥ



ಪ್ರಸಾದ ವಿತರಣೆ



ಧ್ಯಾನ ನಿರತ ಬಾಲಕಿಯರು

# ಅಭಿವೃದ್ಧಿಗೆ ಪೂರಕ ರಾಜ್ಯ ಬಜೆಟ್

**ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್**

ದಾವಣಗೆರೆ,ಮಾ.11- ಕೋವಿಡ್ ಸಂಕಷ್ಟದ ದಿನಗಳು, ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಭಿವೃದ್ಧಿಗೆ ಪೂರಕವಾಗಿರುವ ಬಜೆಟ್ ಮಂಡಿಸಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಬಾರಿಯ ಬಜೆಟ್ ನಲ್ಲಿ ತೆರಿಗೆ ಹೆಚ್ಚಳ ಮಾಡಿಲ್ಲ ಮತ್ತು ಹೊಸ ತೆರಿಗೆಯ ಪ್ರಸ್ತಾಪ ಕೂಡಾ ಇಲ್ಲ. ಎಲ್ಲಾ ವರ್ಗದ ಮತ್ತು ಎಲ್ಲಾ ಕ್ಷೇತ್ರಗಳಿಗೆ ಪ್ರಾಮುಖ್ಯತೆ ನೀಡುವ ಮೂಲಕ ಸಮತೋಲನ ಕಾಪಾಡಿಕೊಂಡು ಬರುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದರು.

ವಿಶ್ವ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮಂಡನೆಯಾದ ಬಜೆಟ್ ನಲ್ಲಿ ಮಹಿಳಾ ಸ್ವಾವಲಂಬನೆ, ಉದ್ಯಮಶೀಲತೆ ಹಾಗೂ ಅಭ್ಯುದಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸೇವಾ ವಲಯದ ಮಹಿಳಾ ಉದ್ಯಮಗಳಿಗೆ ಶೇ. 4ರ ಬಡ್ಡಿ ದರದಲ್ಲಿ 2 ಕೋಟಿವರೆಗೆ ಸಾಲ ಸೌಲಭ್ಯ ನೀಡುತ್ತಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಸಾವಯವ ಉತ್ತೇಜನಕ್ಕಾಗಿ 500 ಕೋಟಿ ಮೀಸಲಿಟ್ಟಿದ್ದು, ಗೋ ಸಂಪತ್ತಿನ ರಕ್ಷಣೆಗಾಗಿ ಪ್ರತಿ ಜಿಲ್ಲೆಗಳಲ್ಲಿ ಗೋಶಾಲೆ ಆರಂಭ ಸೇರಿದಂತೆ, ರೈತ ವರ್ಗಕ್ಕೆ ಪ್ರಾಮುಖ್ಯತೆ ನೀಡಲಾಗಿದೆ ಎಂದು ಹೇಳಿದರು. ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ 31.028 ಕೋಟಿ, ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗೆ 62.150 ಕೋಟಿ, ಆರ್ಥಿಕ ಅಭಿವೃದ್ಧಿಯ ಪ್ರಚೋದನೆಗೆ 52.529 ಕೋಟಿ, ಬೆಂಗಳೂರು ಸಮಗ್ರ ಅಭಿವೃದ್ಧಿಗೆ 7.795 ಕೋಟಿ, ಸಂಸ್ಕೃತಿ, ಪರಂಪರೆ, ನೈಸರ್ಗಿಕ ಸಂಪನ್ಮೂಲ ರಕ್ಷಣೆಗೆ 2.645 ಕೋಟಿ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಗೆ 52.519 ಕೋಟಿ ರೂ. ಮೀಸಲಿಡಲಾಗಿದೆ ಎಂದು ಅವರು ಮಾಹಿತಿ ನೀಡಿದರು. ದಾವಣಗೆರೆ ಜಿಲ್ಲೆಗೆ ಜಯದೇವ ಹೃದ್ರೋಗ ಸಂಸ್ಥೆ ಉಪ ಕೇಂದ್ರ ಹಾಗೂ ಗೋಶಾಲೆ ಮಂಜೂರು ಮಾಡಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸೊಕ್ಕೆ ನಾಗರಾಜ್, ಮಂಜಾನಾಯ್ಕ, ಡಿ. ಹೆಚ್. ಶಿವಶಂಕರ್, ವಿಶ್ವಾಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


## ರೇಣುಕಾಚಾರ್ಯ ಜಯಂತಿ : ನಾಳೆ ಸಭೆ

ದಾವಣಗೆರೆ, ಮಾ.11- ಅಖಿಲ ಭಾರತ ಜಂಗಮ ಮಹಾಸಭಾ, ಕರ್ನಾಟಕ ರಾಜ್ಯ ಬೇಡ ಜಂಗಮ ಮಹಾಸಭಾ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಆಚರಿಸಲು ನಿರ್ಧರಿಸಲಾಗಿದೆ.

ಈ ಪ್ರಯುಕ್ತ ನಾಡಿದ್ದು ದಿನಾಂಕ 13ರ ಶನಿವಾರ ಸಂಜೆ 5.30 ಕ್ಕೆ ಡಾ. ಸದ್ಯೋಜಾತ ಶಿವಾಚಾರ್ಯರ ಹಿರೇಮಠದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ. ಎಲ್ಲಾ ವೀರಶೈವ ಸಮಾಜ ಬಾಂಧವರು ಹಾಗೂ ಮುಖಂಡರು ಸಭೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ವಿವರಕ್ಕೆ ಸಂಪರ್ಕಿಸಿ : 94495-69166, 96636-22055, 94484-43095.

## ಎಸ್‌ಪಿಬಿ ಸ್ಮರಣಾರ್ಥ : ನಾಳೆ ಸಿನಿಮಾ ಸಿರಿಯಿಂದ 'ಗೀತ ನಮನ'



ದಾವಣಗೆರೆ, ಮಾ.11- ಚಲನಚಿತ್ರ ಅಭಿಮಾನಿಗಳ ಕ್ರಿಯಾತ್ಮಕ ಸಂಸ್ಥೆ 'ಸಿನಿಮಾ ಸಿರಿ' ವತಿಯಿಂದ ಮಾ. 13 ರಂದು ಸಂಜೆ 6 ಗಂಟೆಗೆ ನಗರದ ಶಿವಯೋಗ ಮಂದಿರದ ಆವರಣದಲ್ಲಿ ಸಂಗೀತ ಸಾಮ್ರಾಟ್ ದಿ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಸ್ಮರಣಾರ್ಥ 'ಗೀತ ನಮನ' ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಸಂಸ್ಥೆ ಅಧ್ಯಕ್ಷ ಟಿ.ಎಂ. ಪಂಚಾಕ್ಷರಯ್ಯ ಹಾಗೂ ಸಂಸ್ಥೆಯ ಪರಿಕಲ್ಪನೆ ನಿರ್ದೇಶಕ ಸುರಭಿ ಶಿವಮೂರ್ತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೊರೊನಾ ಸಂಕಷ್ಟದ ದಿನಗಳಲ್ಲಿ ಸಾಮಾಜಿಕ ಕಾಳಜಿಯೊಂದಿಗೆ ಕೊರೊನಾ ತಡೆಗೆ ಹಗಲಿರಳು ಶ್ರಮಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಎಸ್ಪಿ ಹನುಮಂತರಾಯ ಅವರನ್ನು ಸನ್ಮಾನಿಸಲಾಗುವುದು ಎಂದರು.

ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಧಾರುಣ ಸಾವನ್ನಪ್ಪಿದ ನಗರದ 10 ಜನ ವನಿತೆಯರಿಗೆ 'ಮರೆಯಲಾಗದ ಮಾಣಿಕ್ಯ' ಶೀರ್ಷಿಕೆಯಡಿ ಪುಷ್ಪಾಂಜಲಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಭದ್ರಾ ವತಿಯ ತೃಪ್ತಿ ಮೆಲೋಡಿಯಸ್ ಕಲಾವಿದರು ಮತ್ತು ಸ್ಥಳೀಯ ಕಲಾವಿದರಾದ ಸಂಗೀತ ರಾಘವೇಂದ್ರ, ಜಗದೀಶ್ ಎಂ.ಜಿ., ಪೂಜಾ, ಆರ್.ಟಿ. ಮೃತ್ಯುಂಜಯ ಅವರು ಎಸ್‌ಪಿಬಿ ಅವರ ಆಯ್ಕೆಯ ಕೆಲವು ಮಧುರ ಗೀತೆಗಳನ್ನು ಹಾಡಲಿದ್ದಾರೆ ಎಂದರು.

ಸ್ಥಳೀಯ ಅವಕಾಶ ವಂಚಿತ ಗಾಯಕ-ಗಾಯಕಿಯರನ್ನು ಗುರುತಿಸಿ ವೇದಿಕೆ ಕಲ್ಪಿಸಿಕೊಡುವ ಕೆಲಸವನ್ನು ಸಿನಿಮಾ ಸಿರಿ ಮಾಡುತ್ತದೆ.

ರಸಮಂಜರಿ ಕಾರ್ಯಕ್ರಮಕ್ಕೆ ಸಂಗೀತಾಸಕ್ತರು ಆಗಮಿಸುವಂತೆ ಕೋರಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಸಿನಿಮಾ ಸಿರಿ ಸಂಸ್ಥೆಯ ಹೆಚ್.ವಿ. ಮಂಜುನಾಥಸ್ವಾಮಿ, ಡಾ. ಬಿ.ಎಸ್. ನಾಗಪ್ರಕಾಶ್, ಸಾಲಿಗ್ರಾಮ ಗಣೇಶ್ ಶೆಣೈ, ಎಂ.ಜಿ. ಜಗದೀಶ್ ಉಪಸ್ಥಿತರಿದ್ದರು.

**ಮಾ. 25 ರಿಂದ 28 ರವರೆಗೆ**

# ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ

ದಾವಣಗೆರೆ, ಮಾ.11- ನಗರದ ನೂರಾನಿ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಇದೇ ದಿನಾಂಕ 25 ರಿಂದ 28 ರವರೆಗೆ ನಾಲ್ಕು ದಿನಗಳ ಕಾಲ ಅಖ್ತರ್ ರಜಾ ಸರ್ಕಲ್ ಹತ್ತಿರದ ಮೈದಾನ (ಎಸ್.ಟಿ.ಪಿ ಘಟಕದ ಹತ್ತಿರ)ದಲ್ಲಿ ಅಂತರರಾಜ್ಯ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ ಎಂದು ಜೆ. ಅಮಾನುಲ್ಲಾ ಖಾನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ವಿವಿಧ ಜಿಲ್ಲೆಗಳ ತಂಡಗಳು ಭಾಗವಹಿಸಲಿದ್ದು, 30 ತಂಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ಭಾಗವಹಿಸುವ ತಂಡಗಳಿಗೆ ಉಚಿತ ವಸತಿ, ಊಟ ಮತ್ತು ಸಮವಸ್ತ್ರ ವಿತರಿಸಲಾಗುವುದು.

ವಿಜೇತ ತಂಡಗಳಿಗೆ 3,01,100 ನಗದು ಪ್ರಥಮ ಬಹುಮಾನ, 1,51,100 ರೂ. ನಗದು ದ್ವಿತೀಯ ಹಾಗೂ 75,100 ರೂ. ನಗದು ತೃತೀಯ ಹಾಗೂ ಆಕರ್ಷಕ ಟ್ರೋಫಿ ನೀಡಲಾಗುವುದು. ಪಂದ್ಯಾವಳಿಯ ಉತ್ತಮ ಪಟು, ಉತ್ತಮ ಬ್ಯಾಟ್ಸ್‌ಮನ್, ಉತ್ತಮ ಬೋಲಿಂಗ್‌ಗಳಿಗೆ ವಿಶೇಷವಾಗಿ ಆಕರ್ಷಕ ಬಹುಮಾನ ನೀಡಲಾಗುವುದು ಎಂದರು.

**ಹಳೇ ಭಾಗದಲ್ಲೂ ಕ್ರೀಡಾಂಗಣ :** 2011 ರಲ್ಲಿ ಪಾಲಿಕೆ ಮಾಲೀಕತ್ವದ 6 ಎಕರೆ ಜಾಗ ಕಾಯ್ದಿರಿಸಲಾಗಿದ್ದರೂ, ಕ್ರೀಡಾಂಗಣ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿತ್ತು. 2015 ರಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕ್ರೀಡಾಂಗಣ ನಿರ್ಮಿಸಲು ಒತ್ತಾಯ ಮಾಡಿದ್ದರಿಂದ 10 ಕೋಟಿ ರೂ. ಟೆಂಡರ್ ಕೂಡ ಆಗಿದೆ. ಕಾಮಗಾರಿ ಆರಂಭವಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನೂರಾನಿ ಸ್ಪೋರ್ಟ್ಸ್ ಅಕಾಡೆಮಿ ಪದಾಧಿಕಾರಿಗಳಾದ ಬಾಷಾ ಮೊಹಿದ್ದೀನ್, ಇನಾಯತ್ ಅಲಿಖಾನ್, ಅಹಮದ್ ರಜಾ, ಇಮ್ರಾನ್ ರಜಾ ಉಪಸ್ಥಿತರಿದ್ದರು.

## ಕೊಮಾರನಹಳ್ಳಿ: ಇಂದಿನಿಂದ ಕ್ರಿಕೆಟ್ ಟೂರ್ನಿ

ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ ಪ್ರಪ್ರಥಮ ಬಾರಿಗೆ ಶಿವರಾತ್ರಿ ಹಬ್ಬದ ಪ್ರಯುಕ್ತ ಗ್ರಾಮಾಂತರ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ಇಂದಿನಿಂದ 3 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

ಪ್ರಥಮ ಬಹುಮಾನ 33,333 ರೂ. ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ 22,222 ರೂ. ಹಾಗೂ ಟ್ರೋಫಿ ಒಳಗೊಂಡಿರುತ್ತದೆ.

ಆಸಕ್ತ ತಂಡಗಳು 1500 ರೂ. ಪ್ರವೇಶ ಶುಲ್ಕದೊಂದಿಗೆ ಹೆಸರು ನೋಂದಾಯಿಸುವಂತೆ ಯು. ಅಣ್ಣೇಶ್, ಎಸ್.ಬಿ. ವಿಜಯ್, ಮುತ್ತುರಾಜ್, ಅಣ್ಣಯ್ಯ, ಪ್ರತಾಪ್ ತಿಳಿಸಿದ್ದಾರೆ. ಮೊ: 9036968604.

ಮಲ್ಲನಾಯ್ಕನಹಳ್ಳಿ ಅಶೋಕ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದು, ಕುಂಬಳೂರು ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಗ್ರಾಮ ಪಂಚಾಯ್ತಿ ಸದಸ್ಯ ಮಡಿವಾಳರ ಬಸವರಾಜ್ ಆಗಮಿಸಲಿದ್ದಾರೆ.

## ನಾಟಕಗಳು ಸಮಾಜದ ಕೈಗನ್ನಡಿ

**ವಿಜಯ ಕುಮಾರ್**

ಹೂವಿನ ಹಡಗಲಿ- ಮಾ.11- ನಾಟಕಗಳು ಸಮಾಜದ ಕೈಗನ್ನಡಿ. ನಮ್ಮ ಬದುಕಿಗೆ ಬಹಳ ಹತ್ತಿರವಾದ ಸಂಗತಿಗಳನ್ನು ಪಾತ್ರಗಳ ಮೂಲಕ ಪರಿಚಯಿಸುತ್ತವೆ ಎಂದು ಜಿ.ಪಂ. ಸದಸ್ಯ ಪಿ. ವಿಜಯಕುಮಾರ್ ಹೇಳಿದರು.

ತಾಲ್ಲೂಕಿನ ಸೋವೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಜನರ ಆಸಕ್ತಿ ಇರುವುದು ಜಾನಪದ ರಂಗಭೂಮಿ ಮತ್ತು ನಾಟಕ, ಬಯಲಾಟ, ಭಜನೆಯಂತಹ ಮನೋರಂಜನಾ ಕಾರ್ಯಕ್ರಮಗಳಿಂದ ಎಂದರು. ಈ ಸಂದರ್ಭದಲ್ಲಿ ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಪಿ.ಟಿ. ಭರತ್ ಸೇರಿದಂತೆ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಗ್ರಾಮದ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಮಾವಿನಹೊಳೆಯಲ್ಲಿ ಇಂದು



ಚನ್ನಗಿರಿ ತಾಲ್ಲೂಕು ಮಾವಿನಹೊಳೆಯಲ್ಲಿ ಮಹಾಶಿವರಾತ್ರಿ ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ ಶ್ರೀ ಕ್ಷೇತ್ರದ ಶ್ರೀ ಗುರು ಮಹಾರುದ್ರಸ್ವಾಮಿ ಜಾತ್ರೆ ಜರುಗಲಿದೆ. ಶ್ರೀ ಸ್ವಾಮಿಗೆ ಅಭಿಷೇಕ, ಮಹಾಪೂಜೆ, ಮಹಾಮಂಗಳರಾತಿ, ನಂತರ ಪ್ರಸಾದ ವಿನಿಯೋಗ ಸೇವಾ ಕಾರ್ಯಗಳು ಜರುಗುವುದು.


## ಬೇಕಾಗಿದ್ದಾರೆ

**ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.**

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.**


**IN THE COURT OF THE HON'BLE III ADDITIONAL SENIOR CIVIL JUDGE AT DAVANAGERE**

O.S. No. 208/2020

Plaintiff : Smt. Gangamma & Ors, D/o Late Durgappa, Aged about 30 years, R/o. Naganuru Village, Davangere District. **- Verses -**
Defendent No. 3 : Sri Nagaraja Lokikere, Aged about 47 years, R/o. # 1st Bus Stop, D.No. 2198, Vidya Nagara, Davangere.

**NOTICE UNDER ORDER-V RULE-20 OF C.P.C.**

Whereas plantiffs have filed the above case against you for declaration and permanent injuction. You defendant No. 3 is hereby directed to appear in this court in person or by advocate on 9-4-21, fore noon at 11.00 a.m. to defend yourself, failing which the petition will be heard and determined ex-parte.

Given under my hand and seal of this court on day of 8-3-2021.

**Sd/-**
**K.G.K. Swamy, S.G. Mahaveer**
Advocate for Petitioner
'Law Solutions' # 417/4A, 4B, 1st Floor, Benakesh Plaza, Opp. Old Janatavani Office, Dixith Road, K.B. Extension, Davanagere.

By order of Court
**Sd/-**
Chief Ministerial Officer, Principal III Addl Senior Civil Judge, Davanagere.

# ನರೇಗಾ ಯೋಜನೆಯಡಿ ಡಿ.ಬಿ.ಕೆರೆ ಪಿಕಪ್ ಕಾಲುವೆಗಳ ಹೂಳು ತೆಗೆಸಿ

**ಪವಿತ್ರ ರಾಮಯ್ಯ**

ಮಲೇಬೆನ್ನೂರು, ಮಾ.11- ನರೇಗಾ ಯೋಜನೆಯಡಿ ಭದ್ರಾ ಹಾಗೂ ದೇವರಬೆಳಕೆರೆ ಪಿಕಪ್ ಕಾಲುವೆಗಳ ಹೂಳು ತೆಗೆಸಲು ಕ್ರಮ ವಹಿಸಿ ಎಂದು ಜಿ.ಪಂ. ಹಾಗೂ ಗ್ರಾ.ಪಂ.ಗಳಿಗೆ ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಹೇಳಿದರು.

ಅವರು ಭಾನುವಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾ.ಪಂ. ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ದೇವರಬೆಳಕೆರೆ ಪಿಕಪ್ ಕಾಲುವೆಗಳು ಹೂಳು ತುಂಬಿಕೊಂಡಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಆಯಾ ಗ್ರಾ.ಪಂ. ವ್ಯಾಪ್ತಿಯಲ್ಲಿ ಬರುವ ಕಾಲುವೆಗಳ ಹೂಳು ತೆಗೆಸಲು ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಜಿ.ಪಂ. ನಿಂದ ಅನುಮತಿ ಪಡೆಯಿರಿ ಎಂದು ಪಿಡಿಓ ನಾಗರಾಜ್ ಸಾರಥಿ ಅವರಿಗೆ ಹೇಳಿದರು.

ಈ ಹಿಂದೆ ದಾವಣಗೆರೆ ಜಿ.ಪಂ. ಸಿಇಓ ಆಗಿದ್ದ ಪದ್ಮಾ ಬಸವಂತಪ್ಪ ಅವರೊಂದಿಗೆ ಈ ಕುರಿತು ಚರ್ಚಿಸಿದ್ದಾಗ ಅವರು ನರೇಗಾ ಯೋಜನೆಯಡಿ ಕಾಲುವೆಗಳ ಹೂಳು ತೆಗೆಸಲು ಒಪ್ಪಿಗೆ ನೀಡಿದ್ದರು.



ಉತ್ಸಾಹಿ ಯುವಕರಾದ ವಾಗೀಶ್ ಸ್ವಾಮಿ ಅವರು ಈ ಭಾಗದ ಜಿ.ಪಂ. ಸದಸ್ಯರಾಗಿರುವುದರಿಂದ ಡಿ.ಬಿ. ಕೆರೆಯ ಪಿಕಪ್ ಕಾಲುವೆಗಳ ಹೂಳು ತೆಗೆಸಲು ಆಸಕ್ತಿ ವಹಿಸಿರುವುದು ತುಂಬಾ ಸಂತೋಷ ತಂದಿದೆ.

ನಾನೂ ಸಹ ಮುಖ್ಯಮಂತ್ರಿಗಳ ಬಳಿ ಭದ್ರಾ ಕಾಡಾಕ್ಕೆ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ. ಕೊರೊನಾ ಕಾರಣದಿಂದಾಗಿ ವಿಳಂಬವಾಗಿದೆ. ಅನುದಾನ ಬಂದ ತಕ್ಷಣ ಕೊನೆ ಭಾಗದ ಕಾಲುವೆಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇನೆಂದರು.

ಇಚ್ಛಾಶಕ್ತಿ ಇದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಉದಾಹರಣೆ. ನನ್ನಲ್ಲಿರುವ ಇಚ್ಛಾಶಕ್ತಿಯಿಂದಾಗಿ ನಾನು ರೈತರ ಸಮಸ್ಯೆ ಕೇಳಿ, ಸಾಧ್ಯವಾದರೆ ಸ್ಥಳದಲ್ಲಿಯೇ ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಆಲೋಚನೆ ಯಾವತ್ತೂ ರೈತರ ಪರವಾಗಿ ಇರುತ್ತದೆ.

ಭದ್ರಾ ಡ್ಯಾಂ ಕಟ್ಟಿರುವುದು 5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಕೊಡುವುದಕ್ಕಾಗಿ ಎಂಬುದನ್ನು ಅಧಿಕಾರದಲ್ಲಿರುವವರು ಅರ್ಥ ಮಾಡಿಕೊಳ್ಳಬೇಕು. ಅಚ್ಚುಕಟ್ಟಿನ ಕೊನೆ ಭಾಗಕ್ಕೆ ನೀರು ಒದಗಿಸಲೇಬೇಕೆಂದು ಸಂಕಲ್ಪ ಮಾಡಿದ್ದೆ. ಇದರಲ್ಲಿ ಯಶಸ್ವಿಯಾಗಿದ್ದೇನೆಂಬ ತೃಪ್ತಿ ನನಗಿದೆ.

ನೇತ್ರಾವತಿ ನದಿಯೂ ಭದ್ರಾ ಕಾಡಾ ವ್ಯಾಪ್ತಿಗೆ ಬರುತ್ತದೆ. ಅದಕ್ಕಾಗಿ ನಾನು ನದಿಗೆ ಭೇಟಿ ನೀಡಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ, ಅವರ ಆಲೋಚನೆ ಹಾಗೂ ಸಲಹೆಗಳನ್ನು ಪಡೆದುಕೊಂಡು ಬಂದಿದ್ದೇನೆ. ಅವರ ಸಲಹೆಗಳು ರೈತರಿಗೆ ಬಹಳ ಉಪಯುಕ್ತವಾಗಿದ್ದು, ಹಂತ ಹಂತವಾಗಿ ಅವುಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತೇನೆ.

ನಾನು ಇಂಜಿನಿಯರ್‌ಗಳ ಬಳಿ ಕಮೀಷನ್ ಕೇಳಿಲ್ಲ. ಅವರಿಂದ ಕೆಲಸ ತೆಗೆದು ಕೊಂಡಿದ್ದೇನೆ. ಇಂಜಿನಿಯರ್‌ಗಳೂ ಸಹ ನನ್ನ ಸೂಚನೆಯಂತೆ ಕೆಲಸ ಮಾಡುತ್ತಿದ್ದಾರೆ. ಭತ್ತ ಕಟಾವಿಗೆ ಬರುವವರಿಗೆ ಅವರನ್ನು ಮಲಗುವುದಕ್ಕೆ ಬಿಡಲ್ಲ, ನಾನೂ ಮಲಗುವುದಿಲ್ಲ ಎಂದು ಪವಿತ್ರ ರಾಮಯ್ಯ ಹೇಳಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯ ಟಿ.ಪಿ. ಧನ್ಯಕುಮಾರ್ ಅವರು ಭದ್ರಾ ನಾಲಾ ನಂ-3 ವಿಭಾಗದ ಇಇ ಕಛೇರಿಯನ್ನು ಬೇರೆಡೆಗೆ ಸ್ಥಳಾಂತರ ಮಾಡದಂತೆ ಮನವಿ ಮಾಡಿದರು.

ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಮಾತನಾಡಿ, ಕಾಡಾ ಅಧ್ಯಕ್ಷರು ಬಹಳ ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಕೊನೆ ಭಾಗದ ರೈತರ ಬಗ್ಗೆ ಈಗಿರುವ ಕಾಳಜಿ ಭತ್ತ ಕಟಾವಿಗೆ ಬರುವ ತನಕ ಇರುತ್ತದೆ ಎಂಬ ನಂಬಿಕೆ ನನಗಿದೆ. ಹಾಗಾಗಿ ಕೊನೆ ಭಾಗದ ರೈತರು ಈ ಬಾರಿ ನೀರಿನ ಬಗ್ಗೆ ಚಿಂತೆ ಮಾಡುವುದು ಬೇಡ ಎಂದರು.

ಗ್ರಾ.ಪಂ. ಅಧ್ಯಕ್ಷೆ ನೇತ್ರಾವತಿ ಕೊಟ್ರೇಶ್, ಭದ್ರಾ ನಾಲಾ ನಂ. 3 ವಿಭಾಗದ ಇಇ ಚಿದಂಬರ್‌ಲಾಲ್, ಎಇಇ ಸಂತೋಷ್, ಸಿರಿಗೆರೆಯ ತಿಪ್ಪೇರುದ್ರಪ್ಪ, ಪಾಲಾಕ್ಷಪ್ಪ, ಭಾನುವಳ್ಳಿಯ ಹೆಚ್.ಎಸ್. ಕರಿಯಪ್ಪ, ಪವಾಡಿ ಮಂಜಪ್ಪ ಹಾಗೂ ಗ್ರಾ.ಪಂ. ಸದಸ್ಯರು ಹಾಜರಿದ್ದರು.


## ಹಾರ್ದಿಕ ಅಭಿನಂದನೆಗಳು



ZRUCC ಸೆಂಟ್ರಲ್ ರೈಲ್ವೆ ಬೋರ್ಡ್ ಡೈರೆಕ್ಟರ್ ಆಗಿ ನೇಮಕ ಆಗಿರುವ

**ಶ್ರೀ ಹೆಚ್.ಎಸ್. ಲಿಂಗರಾಜು**

ಇವರಿಗೆ ಹಾರ್ದಿಕ ಅಭಿನಂದನೆಗಳು

+ ಶ್ರೀಮತಿ ಜಯಮ್ಮ ಶ್ರೀ ಕೆ. ದುರುಗಪ್ಪ, ಹದಡಿ.
+ ಶ್ರೀಮತಿ ಹೆಚ್.ಎಸ್. ಶಿವಮ್ಮ ಶ್ರೀ ಕೆ. ಸಿದ್ದಪ್ಪ
+ ಶ್ರೀಮತಿ ಹೆಚ್.ಎಸ್. ರೇಣುಕಾ, ಶ್ರೀ ಕೆ. ಪರಮೇಶ್ವರಪ್ಪ, ದಾವಣಗೆರೆ.
+ ಶ್ರೀಮತಿ ಪುಷ್ಪಾ ಶ್ರೀ ಹೆಚ್.ಎಸ್. ದಿನೇಶ್‌ಕುಮಾರ್, ದಾವಣಗೆರೆ.

# ಪ್ರಧಾನಿ ತಾಯಿಗೆ ಕೊರೊನಾ ಲಸಿಕೆ

ಅಹಮದಾಬಾದ್, ಮಾ. 11 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ತಾಯಿ ಹಿರಾಬಾ ಅವರು ಗುರುವಾರ ಕೊರೊನಾ ಲಸಿಕೆ ಪಡೆದುಕೊಂಡಿದ್ದಾರೆ.

ತಮ್ಮ ತಾಯಿ ಮೊದಲ ಡೋಸ್ ಲಸಿಕೆ ಪಡೆದಿರುವುದನ್ನು ತಿಳಿಸಲು ಹರ್ಷವಾಗುತ್ತಿದೆ. ಪ್ರತಿಯೊಬ್ಬರೂ ಲಸಿಕೆ ಪಡೆಯಲು ನೆರವಾಗಬೇಕು ಹಾಗೂ ಉತ್ತೇಜನ ನೀಡಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ಸಹೋದರ ಪಂಕಜ್ ಮೋದಿ ಅವರ ಜೊತೆ ಇರುವ 95 ವರ್ಷದ ಹೀರಾಬಾ ಅವರು ಗಾಂಧಿನಗರದ ರಾಯಸನ್ ಹಳ್ಳಿಯಲ್ಲಿ ನೆಲೆಸಿದ್ದಾರೆ.



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿಯ ಪ್ರಯುಕ್ತ ಕುಂಭಾಭಿಷೇಕ, ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ ನಡೆಯಿತು.

# ಕೊರೊನಾ ರೋಗಿಗಳನ್ನು ಆರೈಕೆ ಮಾಡಿದ ಆಶಾ ಕಾಂಬ್ಳೆಗೆ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್‌ನಿಂದ ಗೌರವ



ದಾವಣಗೆರೆ, ಮಾ. 11 - ಕೊರೊನಾ ರೋಗಿಗಳ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲೊಬ್ಬರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ನಗರದ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ನರ್ಸಿಂಗ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆಶಾ ಕಾಂಬ್ಳೆ ಅವರನ್ನು ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಿಂದ ಸನ್ಮಾನಿಸಲಾಯಿತು.

ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ಏರ್ಪಾಡಾಗಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಆಶಾ ಕಾಂಬ್ಳೆ ಅವರನ್ನು ಶಾಲು ಹೊದಿಸಿ ಫಲ-ಪುಷ್ಪಗಳೊಂದಿಗೆ ಸನ್ಮಾನಿಸಿ, ಗೌರವ ಸಮರ್ಪಿಸಿದರು.

ಕಳೆದ ಎಂಟತ್ತು ತಿಂಗಳ ಕಾಲ ವಿಶ್ವವನ್ನೇ ತಲ್ಲಣಗೊಳಿಸಿದ ಕೊರೊನಾ ಸಮಯದಲ್ಲಿ ಆ ಹೆಸರನ್ನು ಕೇಳಿದಾಕ್ಷಣ ಓಡಿ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಒಂದೇ ಒಂದು ದಿನ ರಜೆಯನ್ನು ತೆಗೆದುಕೊಳ್ಳದೇ ಕಾಯಕ ಮಾಡುವುದರ ಮೂಲಕ ರೋಗಿಗಳ ಹಾರೈಕೆ ಮಾಡು ವಲ್ಲಿ ಆಶಾ ಕಾಂಬ್ಳೆ ಅವರ ಸೇವೆ ಶ್ಲಾಘನೀಯವಾದದ್ದು.

ಮೂಲತಃ ಹುಬ್ಬಳ್ಳಿಯವರಾದ ಆಶಾ, ಸುಮಾರು 35 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ತುರ್ತು ಚಿಕಿತ್ಸಾ ಘಟಕದಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಸರ್ಜರಿ, ಮೆಡಿಕಲ್, ಹೆರಿಗೆ ವಿಭಾಗಗಳಲ್ಲೂ ಅವರ ಕಾರ್ಯ ನಿರ್ವಹಣೆ ಅನನ್ಯ.

ಸನ್ಮಾನ ಸ್ವೀಕರಿಸಿ ಮಾತನಾಡಿದ ಆಶಾ ಕಾಂಬ್ಳೆ, ಕೊರೊನಾ ಸಮಯದಲ್ಲಿ ತಾವು ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿದರು. 250ಕ್ಕೂ ಹೆಚ್ಚು ತನ್ನ ಸಿಬ್ಬಂದಿಗಳು ಹಗಲು-ರಾತ್ರಿ ಎನ್ನದೇ ಕೆಲಸ ಮಾಡುವುದರೊಂದಿಗೆ ತಮಗೆ ಸಾತ್ ನೀಡಿದ್ದು, ಅವರೆಲ್ಲರ ಸಹಾಯ, ಸಹಕಾರ ಮರೆಯುವಂತಿಲ್ಲ. ಇದರಿಂದಾಗಿ ತಮ್ಮ ಕಾಯಕ ಸಾರ್ಥಕವಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು.


ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಮಾತನಾಡಿ, ವಿಶ್ವದಲ್ಲಿನ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಜೀವಕ್ಕೆ ಅಂಜದೆ ರೋಗಿಗಳ ಸೇವೆ ಮಾಡಿದ ಆಶಾ ಕಾಂಬ್ಳೆ ಅವರ ಸೇವೆ ಮೆಚ್ಚುವಂತದ್ದು ಎಂದು ಹೇಳಿದರಲ್ಲದೇ, ಆಶಾ ಅವರು ನಮ್ಮ ಬ್ಯಾಂಕಿನಿಂದ ಗೌರವ ಸ್ವೀಕರಿಸಿರುವುದು ನಮ್ಮ ಬ್ಯಾಂಕಿನ ಭಾಗ್ಯ ಎಂದು ಹೇಳಿದರು.

ಬ್ಯಾಂಕಿನ ಉಪಾಧ್ಯಕ್ಷ ಕಿರುವಾಡಿ ಸೋಮಶೇಖರ್, ನಿರ್ದೇಶಕರುಗಳಾದ ಎಸ್.ಕೆ. ವೀರಣ್ಣ, ರಮಣ್ ಲಾಲ್ ಸಂಘವಿ, ಎ.ಹೆಚ್. ಕುಬೇರಪ್ಪ, ಶಂಕರ್ ಖಟಾವ್‌ಕರ್, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶ್ರೀಮತಿ ಶಶಿಕಲಾ ರುದ್ರಯ್ಯ, ಎಸ್.ಕೆ. ಪ್ರಭುಪ್ರಸಾದ್, ಪಿ.ಹೆಚ್. ವೆಂಕಪ್ಪ, ಕೆ.ಹೆಚ್. ಶಿವಯೋಗಪ್ಪ, ಶ್ರೀಮತಿ ಕೆ.ಎಂ. ಜ್ಯೋತಿ ಪ್ರಕಾಶ್, ಶ್ರೀಮತಿ ಅನಿಲಾ ಇಂಧೂದರ ನಿಶಾನಿಮಠ, ಆರ್.ವಿ. ಶಿರಸಾಲಿಮಠ, ಕಿರಣ್ ಶೆಟ್ಟಿ, ಜಿ.ಕೆ. ವೀರಣ್ಣ, ಶ್ರೀಮತಿ ಉಮಾ ವಾಗೀಶ್, ನಾಗೇಂದ್ರಾಚಾರಿ, ಕೆ.ಎಂ. ಬಸವರಾಜ್, ಶ್ರೀಮತಿ ಜಿ.ಸಿ. ವಸುಂಧರ, ಶ್ರೀಮತಿ ಶೈಲಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗ ಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

# ಸಬ್‌ರಿಜಿಸ್ಟ್ರಾರ್ ಕಚೇರಿ : ಸ್ಥಗಿತಗೊಂಡಿದ್ದ ನೋಂದಣಿ ಕಾರ್ಯ ಆರಂಭ

ದಾವಣಗೆರೆ, ಮಾ. 11 - ಹಿರಿಯ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಕಳೆದ ವಾರದಿಂದಲೂ ಗಣಕೀಕರಣದ ತಾಂತ್ರಿಕ ಸಮಸ್ಯೆಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ನೋಂದಣಿ ಮತ್ತು ಇನ್ನಿತರೆ ಸೇವೆಗಳು ಆರಂಭಗೊಂಡಿವೆ ಎಂದು ಹಿರಿಯ ಉಪ ನೋಂದಣಾಧಿಕಾರಿಗಳಾದ ಎಲ್.ರಾಮಕೃಷ್ಣ, ಜಿ. ಪ್ರಸನ್ನ ತಿಳಿಸಿದ್ದಾರೆ. ಅಧಿಕಾರಿಗಳು ತಾಂತ್ರಿಕ ಸಮಸ್ಯೆಯನ್ನು ಶೀಘ್ರವಾಗಿ ನಿವಾರಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನೋಂದಣಿ ಕಾರ್ಯವನ್ನು ಆರಂಭಿಸಿದ್ದಾರೆ ಎಂದು ಪತ್ರ ಬರಹಗಾರರ ಸಂಘದ ಅಧ್ಯಕ್ಷ ಸಂಗಮೇಶ್ ಎಲಿಗಾರ್ ಸಹ ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದ್ದಾರೆ.













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte